# ಹಂಪಿ ಟೈಮ್ಸ್
HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 274 Issue: 274 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 08.05.2025 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2



1,30,000+
Digital E-PAPER READERS
To book Classified Display Ad
in HAMPI TIMES
Please call on
9448633038
No.1 HAMPI TIMES LEADING PRINT & DIGITAL District News Paper



ಹಂಪಿ ಟೈಮ್ಸ್
SCAN TO WATCH
SSLC ಹೈಸ್ಕೋರ್ ಸೀಕ್ರೆಟ್ ಏನು ಗೊತ್ತಾ ಟಾಪರ್ ಇಂದುಶ್ರೀ ಮಾತಲ್ಲೇ ಕೇಳಿ...


**ನಿನಗೆ ನೀನೇ ಬೆಳಕು**

ಚಟುವಟಿಕೆ ಇಲ್ಲದ ಪಾಠ ಹೂಗಳಿಲ್ಲದ ತೋಟವದ್ದಂತೆ

**ದೇವಾಲಯ ದರ್ಶನ**

ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ


Call Us for Advertisements
Good Opportunity for Branding
ನಿಮ್ಮೂರ ಜಾತ್ರೆ ಉತ್ಸವಕ್ಕೆ ಶುಭಾಶಯ, ಸಾಧಕರಿಗೆ/ ವಿದ್ಯಾರ್ಥಿಗಳಿಗೆ ಅಭಿನಂದನೆ ಕೋರಲು ಸಂಪರ್ಕಿಸಿ
M:9448633038
ಕೊನೆ ಕ್ಷಣದವರೆಗೆ ಕಾದು ನಿರಾಶರಾಗಬೇಡಿ!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ


# ಜನರಿಗೆ ಕುಡಿಯುವ ನೀರು ಕೊಡಲು ನಿರ್ಲಕ್ಷ್ಯವಹಿಸಿದ್ರೆ ಪ್ರಕರಣ ದಾಖಲಿಸಿ

## ಇಓಗೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಖಡಕ್ ಸೂಚನೆ

## ಬೋರವೆಲ್ ನೀರು ಪಡೆದು ಪೂರೈಸಿ, ರೈತರಿಗೆ ಹಣ ಪಾವತಿಸಿ



■ **ಹಂಪಿ ಟೈಮ್ಸ್ ಹರಪನಹಳ್ಳಿ**
ತಾಲೂಕಿನಲ್ಲಿ ಯಾವುದೇ ಕಾರಣಕ್ಕೂ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಗ್ರಾ.ಪಂ ಅಭಿವೃದ್ಧಿ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ಮೇ 20 ರಂದು ಹೊಸಪೇಟೆಯಲ್ಲಿ ನಡೆಯಲಿರುವ ಸಾಧನಾ ಸಮಾವೇಶದ ಕಾರ್ಯಕ್ರಮದ ಪ್ರಯುಕ್ತ ತಾಲೂಕು ಪಂಚಾಯ್ತಿ ರಾಜೀವ್ ಗಾಂಧಿ ಸಭಾಂಗಣದಲ್ಲಿ ಬುಧವಾರ ನಡೆದ ಪೂರ್ವ ಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ತಾಲೂಕಿನ ಹಲವಾರು ಪಂಚಾಯ್ತಿಗಳಲ್ಲಿ ನಿರಿನ ಕೊರತೆ ಅಭಾವ ಹೆಚ್ಚಿದ್ದು, ಖಾಸಗಿ ಬೋರ್‌ವೆಲ್ ಮೂಲಕ ಬಾಡಿಗೆ ಪಡೆದು ಟ್ಯಾಂಕರ್ ಮೂಲಕ ಗ್ರಾಮಗಳಿಗೆ ನೀರು ಒದಗಿಸಿ, ರೈತರಿಗೆ ಹೆಚ್ಚಿನ ಹಣವನ್ನು ನೀಡಿ ಅವರಿಂದ ನೀರನ್ನು ಪಡೆಯಿರಿ ಹಣವನ್ನು ನೀಡಲು ಯಾವುದೇ ರೀತಿಯ ಮೀನಾಮೇಷ ಮಾಡದೆ ರೈತರಿಗೆ ನೀಡಿ ಎಂದು ಜಿಲ್ಲಾಧಿಕಾರಿ ಪಿಡಿಓಗಳಿಗೆ ಸೂಚಿಸಿದರು.

ತಾಲೂಕಿನ ಲಕ್ಷೀಪುರ ಗ್ರಾಮ ಪಂಚಾಯ್ತಿಯಲ್ಲಿ ನೀರು ಇದ್ದು, ನೀರಾವರಿ ಕೊರತೆಯಿದೆ ನಿರಾವರಿ ಇಲಾಖಾಧಿಕಾರಿಗಳಿಗೆ ಸೂಚಿಸಿದರೆ ವಿಳಂಬ ಮಾಡುತ್ತಿದ್ದಾರೆ ಎಂದು ಪಿಡಿಓ ಸಭೆಯಲ್ಲಿ ಡಿಸಿ ಅವರ ಗಮನಕ್ಕೆ ತಂದರು. ಸಾರ್ವಜನಿಕರಿಗೆ ಸೇವೆ ಕಲ್ಪಿಸುವಲ್ಲಿ ನಿರ್ಲ್ಯಕ್ಷ ತೋರಿದರೆ ನೀರಾವರಿ ಇಲಾಖೆಯವರ ವಿರುದ್ಧ ಕೂಡಲೇ ಪ್ರಕರಣ ದಾಖಲಿಸಿ ಎಂದು ಇಓ ರವರಿಗೆ ಸೂಚಿಸಿದರು.

ನೀರಾವರಿಗೆ ಸಂಬಂದಿಸಿದಂತೆ ದಿನ ಪೂರ್ತಿ ವಿದ್ಯುತ್ ಒದಗಿಸಬೇಕು, ಯಾವುದೇ ಕಾರಣಕ್ಕೂ ನೀರಿನ ಅಭಾವ ಬಾರದಂತೆ ಕ್ರಮ ವಹಿಸಿ ಎಂದರು, ನಿತ್ಯ ಸಾರ್ವಜನಿಕರಿಗೆ ಅನುಕೂಲವಾಗುವ ನೀರಿಗೆ 15 ನೇ ಹಣಕಾಸು ಯೋಜನೆಯಲ್ಲಿ ವಿಷೇಶ ಅನುದಾನ ಮೀಸಲಿಡಿ ಬೇರೆ ತೆರನಾದ ಇಲಾಕೆಗಳಿಗೆ ಕೆಕೆಆರ್.ಡಿಬಿ ಯಿಂದ ಒದಗಿಸಲು ವ್ಯವಸ್ಥೆ ಮಾಡಿ ಕೊಡುವ ಭರವಸೆ ನೀಡಿದರು.

ತಾಲೂಕಿನಲ್ಲಿ 231 ಸ್ಮಶಾನಗಳಿದ್ದು, ಅದರಲ್ಲಿ 24 ಭೂಮಿಗಳನ್ನು ಸ್ಥಳಿಯರು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಎಡಿ ಸೋಮ ಶೇಖರ್ ಯು.ಎಚ್ ತಿಳಿಸಿದರು, ಅದಕ್ಕೆ ಪ್ರತಿಕ್ರಿಯಿಸಿ ಆ ರೀತಿಯ ಸಮಸ್ಯೆಗಳನ್ನು ಕೂಡಲೆ ಸರಿಪಡಿಸಿ, ಯಾರಾದರು ಅಡ್ಡಿಪಡಿಸಲು ಮುಂದಾದರೆ ಅವರ ವಿರುದ್ದ ಪ್ರಕರಣ ದಾಖಲಿಸಿ ಎಂದು ವಿಎ ಹಾಗೂ ಪಿಡಿಓ ಗಳಿಗೆ ಸೂಚಿಸಿದರು.

ಇನ್ನು ಸ್ಮಶಾನ ಜಾಗಗಳು ಹದ್ದುಬಸ್ತು ಮಾಡಿಕೊಡುವಂತೆ ತಹಶೀಲ್ದಾರ್ ರವರಿಗೆ ಸೂಚಿಸಿದರು, ಕನಕನ ಬಸಾಪುರ ಗ್ರಾಮದಲ್ಲಿ ಹಿಂದೂ-ಮುಸ್ಲೀಂ ಸ್ಮಶಾನ ಜಾಗವು ಒಂದೇ ಕಡೆ ಇದ್ದು, ಹದ್ದು ಬಸ್ತು ಮಾಡಲು ಸ್ಥಳೀಯರು ಸಹಕರಿಸುತ್ತಿಲ್ಲವೆಂದು ಪಿಡಿಓ ತಿಳಿಸಿದಾಗ ಅವರಿಗೆ ಸರಕಾರಿ ಜಾಗದ ಬಗ್ಗೆ ಸ್ಪಷ್ಟವಾದ ಮಾಹಿತಿ ನೀಡಿ ಸಂಬಂಧಿಸಿದ ಜಾಗವನ್ನು ಮಾತ್ರ ಹದ್ದಬಸ್ತು ಮಾಡಿ ಯಾರಿಗೂ ಧಕ್ಕೆ ಯಾಗದಂತೆ ಕ್ರಮವಹಿಸಿ ಎಂದರು. >>4



ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರ (ಪಿಒಕೆ)ಗಳಲ್ಲಿನ ಉಗ್ರಗಾಮಿಗಳ ನೆಲೆಯನ್ನು ನಾಶ ಮಾಡಿ ಪರಾಕ್ರಮ ಮೆರೆದ ಭಾರತದ ಹೆಮ್ಮೆಯ ಧೀರ ಸೈನಿಕರಿಗೆ ಇಡೀ ರಾಜ್ಯದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಸಿದ್ದರಾಮಯ್ಯ,** ಮುಖ್ಯಮಂತ್ರಿ,



ಭಾರತೀಯ ಸಶಸ್ತ್ರ ಪಡೆಗಳು, ಸರ್ಕಾರ ದೇಶದ ಘನತೆಯನ್ನು ಉನ್ನತ ಮಟ್ಟದಲ್ಲಿಡಲು ಶ್ರಮಿಸುತ್ತಿರುವ ಎಲ್ಲರ ಬೆಂಬಲಕ್ಕೆ ನಮ್ಮ ಬೆಂಬಲವಿದೆ. ರಾಷ್ಟ್ರದ ಹಿತಕ್ಕಾಗಿ ಸೇನೆ ತೆಗೆದುಕೊಂಡ ತೀರ್ಮಾನ ದೇಶದ ಘನತೆಯನ್ನು ಹೆಚ್ಚಿಸಿದೆ.

**ಡಿ.ಕೆ.ಶಿವಕುಮಾರ,** ಉಪ ಮುಖ್ಯಮಂತ್ರಿ

# ನಾಳೆ ಕಮಲಾಪುರ ಪಟ್ಟಣಕ್ಕೆ ನೀರು ಪೂರೈಕೆ ಕಾಮಗಾರಿಗೆ ಚಾಲನೆ

■ **ಹಂಪಿ ಟೈಮ್ಸ್ ಹೊಸಪೇಟೆ**
ಕಮಲಾಪುರ ಪಟ್ಟಣಕ್ಕೆ ಅಮೃತ-2 ಯೋಜನೆಯಡಿ ನಿರಂತರ ಕುಡಿಯುವ ನೀರು ಪೂರೈಸುವ ಕಾಮಗಾರಿಗೆ ಮೇ 9 ರಂದು ಸಂಜೆ 5 ಗಂಟೆಗೆ ಕಮಲಾಪುರದಲ್ಲಿ ಶಾಸಕ ಹೆಚ್.ಆರ್.ಗವಿಯಪ್ಪ ಭೂಮಿಪೂಜೆ ನರೆವೇರಿಸುವರು.

ರೂ.26.17 ಕೋಟಿ ವೆಚ್ಚದ ಕಾಮಗಾರಿ ಇದಾಗಿದ್ದು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಸುಧಾರಿತ ಶುದ್ದ ಕುಡಿಯುವ ನೀರನ್ನು ಸರಬರಾಜು ಮಾಡುವ ಯೋಜನೆ ಇದಾಗಿದೆ. 2055 ಕ್ಕೆ ನಿರೀಕ್ಷಿತ 43 ಸಾವಿರ ಜನಸಂಖ್ಯೆಗನುಗುಣವಾಗಿ 7.03 ಎಂಎಲ್‌ಡಿ ಪ್ರಮಾಣದ ನೀರು ಸರಬರಾಜು ಮಾಡಲು ವಿನ್ಯಾಸಗೊಳಿಸಲಾಗಿದೆ. ಪೈಪ್‌ಲೈನ್, ಮೇಲ್ಮಟ್ಟ ಜಲಸಂಗ್ರಹಗಾರ ನಿರ್ಮಾಣ, ವಿತರಣಾ ಕೊಳವೆ ಮಾರ್ಗ, ಒಟ್ಟು 6 ಸಾವಿರ ಮನೆಗಳಿಗೆ ನಲ್ಲಿ ಸಂಪರ್ಕ ಕಲ್ಪಿಸುವುದು ಇದರ ಉದ್ದೇಶವಾಗಿರುತ್ತದೆ.


14 ಭಾಷೆ
ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com


**ಮೈಕ್ರೋ ನ್ಯೂಸ್**

## ಮೇ ೯ ಪ್ರತಿಷ್ಠಿತ ಖಾಸಗಿ ಶಾಲೆಗಳ ದಾಖಲಾತಿಗೆ ಪ್ರವೇಶ ಪರೀಕ್ಷೆ

**ಹಂಪಿ ಟೈಮ್ಸ್ ಬಳ್ಳಾರಿ:**
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ 2025-26ನೇ ಸಾಲಿಗೆ 5 ನೇ ತರಗತಿಯಲ್ಲಿ ಶೇ.60 ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ 6 ನೇ ತರಗತಿಗೆ ಪ್ರತಿಷ್ಠಿತ ಖಾಸಗಿ ಶಾಲೆಗಳ ಪ್ರವೇಶಾತಿಗೆ ಮೇ 09 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ರವರೆಗೆ ನಗರದ ಅಂಚೆ ಕಚೇರಿ ಪಕ್ಕದ ಸರ್ಕಾರಿ ಬಾಲಕೀಯರ ಜೂನಿಯರ್ ಕಾಲೇಜಿನಲ್ಲಿ ಅರ್ಹತಾ ಪ್ರವೇಶ ಪರೀಕ್ಷೆ ನಡೆಸಲಾಗುತ್ತದೆ ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಆಯಾ ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಯಲ್ಲಿ ಪ್ರವೇಶ ಪತ್ರ ಪಡೆದು, ಮೇ 09 ರಂದು ಬೆಳಿಗ್ಗೆ 10 ಗಂಟೆಗೆ ಪರೀಕ್ಷಾ ಕೇಂದ್ರದಲ್ಲಿ ಹಾಜರಿರಬೇಕು. ಹೆಚ್ಚಿನ ಮಾಹಿತಿಗಾಗಿ ದೂ.08392-242453, ಮೊ.9986302091 ಗೆ ಸಂಪರ್ಕಿಸಬಹುದು.

# ಕ್ರಮ ಪಡಿತರ ಸಾಗಣೆ, 193 ಕ್ವಿಂಟಾಲ್ ಆಹಾರಧಾನ್ಯ ವಶ



■ **ಹಂಪಿ ಟೈಮ್ಸ್ ಹೊಸಪೇಟೆ**
ತಾಲ್ಲೂಕಿನ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಚೀಟಿದಾರರಿಗೆ ವಿತರಿಸುವ ಅಕ್ಕಿ ಮತ್ತು ರಾಗಿಯನ್ನು ಅಕ್ರಮವಾಗಿ ಸಾಗಣೆ ಮಾಡುತ್ತಿರುವುದನ್ನು ಮೇ 6 ರಂದು ಪತ್ತೆಮಾಡಿ 182.6 ಕ್ವಿಂಟಾಲ್ ಅಕ್ಕಿ ಮತ್ತು 10.50 ಕ್ವಿಂಟಾಲ್ ರಾಗಿಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ರಿಯಾಜ್ ತಿಳಿಸಿದ್ದಾರೆ.

ಇವರ ಮೇಲೆ ಅಗತ್ಯ ವಸ್ತುಗಳ ಕಾಯ್ದೆಯಡಿ ನಾಲ್ಕು ಪ್ರಕರಣಗಳನ್ನು ದಾಖಲಿಸಲಾಗಿದೆ. ಸಾಗಣೆ ಮಾಡುತ್ತಿದ್ದ 1 ವಾಹನ ಸೇರಿ ಮೂರು ಗೋದಾಮುಗಳನ್ನು ಸೀಜ್ ಮಾಡಲಾಗಿದೆ. ಇಬ್ಬರು ಆರೋಪಿಗಳನ್ನು ಪೊಲೀಸ್ ವಶಕ್ಕೆ ನೀಡಿ ಮುಂದಿನ ತನಿಖೆ ಕೈಗೊಳ್ಳಲಾಗುತ್ತಿದೆ. ಸೀಜ್ ಮಾಡಿದ ಆಹಾರ ಧಾನ್ಯದ ಮೌಲ್ಯ ರೂ.6,05,660 ಗಳಾಗಿರುತ್ತದೆ ಎಂದು ಮಾಹಿತಿ ನೀಡಿದ್ದಾರೆ.


HAMPI TIMES VIJAYANAGARA
ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
ನಂ.1
ಜಿಲ್ಲಾಮಟ್ಟದ ದಿನಪತ್ರಿಕೆ
E-PAPER USER ENGAGEMENT 1,50,000+
Searching for the perfect platform to promote your brand? Want to reach more people? Choose
HAMPI TIMES
Promote your business with us!
Place Your Ads in HAMPI TIMES Kannada Daily
No.1 Local News Paper in the Vijayanagara Dist.
1 Lakh plus Digital readers & Growing
Available in Print and Digital Edition
Dedicated to Local and Regional news
Trusted Readershiip Community
E-paper available at www.hampitimes.com/epaper.hampitimes.com
Flexible Advertising Packages
ADS
POWERFULL ADVERTISING FLATFORM FOR LOCAL BUSINESS!
Contact Us
9448633038


# ಸ್ನೇಹ ಸಮ್ಮಿಲನ ಸವಿ ಸವಿ ನೆನಪು



■ **ಹಂಪಿ ಟೈಮ್ಸ್ ಹರಪನಹಳ್ಳಿ**
ಪಟ್ಟಣದ ಹೊರ ವಲಯದಲ್ಲಿರುವ ದಡಾಗರನಹಳ್ಳಿ ಬಳಿ ಇರುವ ಮಯೂರಿ ಪಾರ್ಮ್ ಹೌಸ್ ನಲ್ಲಿ ಸರಕಾರಿ ಪ್ರಾಥಮಿಕ ಮೇನ್ ಶಾಲೆ ಹಾಗೂ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಮೊದಲ ವರ್ಷದ ಸಂಭ್ರಮಾಚರಣೆ ನಡೆಯಿತು.

ಮೊದಲಿಗೆ ಪ್ರತಿಯೊಬ್ಬರು ವೈಯಕ್ತಿಕ ಪರಿಚಯ, ಅಂತಾಕ್ಷರಿ, ಉಬಯ ಕುಶಲೋಪರಿ, ಶಾಲೆ, ಹೈಸ್ಕೂಲ್, ಕಾಲೇಜಿನಲ್ಲಿ ಪಾಠ, ಪ್ರವಚನ, ಕ್ರೀಡೆಗಳ ಬಗ್ಗೆ ವಿದ್ಯಾರ್ಥಿ ಜೀವನದ ಸವಿ ಸವಿ ನೆನಪಿನ ಮೇಲುಕು ಹಾಕಿದರು. ಮೇನ್ ಶಾಲೆ ಹಾಗೂ ಸರಕಾರಿ ಜೂನಿಯರ್ ಕಾಲೇಜ್ ನಲ್ಲಿ ಮುಖ್ಯ ಗುರುವಾಗಿದ್ದ ಶಿಕ್ಷಕರು ತಮ್ಮ ನೆನಪುಗಳನ್ನು ಮೆಲುಕು ಹಾಕಿದರು.

ಮೊದಲ ವರ್ಷದ ಸ್ನೇಹ ಸಮ್ಮಿಲನ ಕಾರ್ಯಕ್ರಮ ಖುಷಿ ಖುಷಿಯಾಗಿ ಎಲ್ಲ ಸ್ನೇಹಿತರು ತಮ್ಮ ಕುಟುಂಬದೊಂದಿಗೆ ಭಾಗವಹಿಸಿ ಬೆಳಿಗ್ಗೆಯಿಂದ ಸಂಜೆವರೆಗೆ ಎಲ್ಲರೊಂದಿಗೆ ಬೆರೆತು ತಮ್ಮ ವಿದ್ಯಾರ್ಥಿ ಜೀವನ, ಶೈಕ್ಷಣಿಕ ಸಾಧನೆ, ವೃತ್ತಿ ಜೀವನ ಕುರಿತು ಪರಸ್ಪರ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಬಹಳ ವರ್ಷಗಳ ಬಳಿಕ ಒಂದೆಡೆ ಸೇರುತ್ತಿರುವುದೇ ಒಂದು ವಿಸ್ಮಯವಾಗಿದೆ. ಅಂದು ಶಾಲೆ ಬಿಟ್ಟು ಬೇರೆ ಕಡೆ ಹೋದ ನಂತರ ಯಾರೂ ಸಂಪರ್ಕದಲ್ಲಿರಲಿಲ್ಲ. ಎಲ್ಲೆಲ್ಲೋ ಹರಿದುಹಂಚಿಹೋಗಿದ್ದರು. ಕೇವಲ ಒಂದು ವರ್ಷದಿಂದೀಚೆಗೆ ಎಲ್ಲರು ಸಂಪರ್ಕಕ್ಕೆ ಬಂದು ಸ್ನೇಹಿತರೊಂದಿಗೆ ಒಟ್ಟಾಗಿ ಸೇರಿದ್ದು ಭಾರಿ ಖುಷಿ ತಂದಿದೆ. ಬಾಲ್ಯದ ದಿನಗಳನ್ನು ನೆನೆದು ಎಲ್ಲರೂ ಭಾವುಕರಾಗಿದ್ದೇವೆ ಎಂದು ಅನೇಕರು ಅಭಿಪ್ರಾಯಪಟ್ಟರು.

ಇಡೀ ದಿನ ಪ್ರತಿ ಹಂತದಲೂ >>4

## ಸ್ಟುಡೆಂಟ್ ಕಾಲಂ

# ಮಲ್ಲಿಗೆ ಘಮ ಮನಸ್ಸು ಹಗುರ



ಮಲ್ಲಿಗೆಯ ಎಂಬುವುದು ಮನುಷ್ಯನ ಮನಸ್ಸಿಗೆ ಖುಷಿ ಕೊಡುವ ದ್ರವ್ಯಕವಾದ ಸುಗಂಧವಾಗಿದೆ.ಮಲ್ಲಿಗೆ ಎಂದರೆ ಯಾರಿಗೆ ಇಷ್ಟ ಇಲ್ಲ ಹೇಳಿ? ಚಿಕ್ಕ ಮಕ್ಕಳಿಂದ ಹಿಡಿದು ಹಿರಿಯ ವಯಸ್ಸಿನವರಿಗೂ ಇಷ್ಟ ವಾಗುವಂತಹದ್ದು ಪ್ರತಿಯೊಬ್ಬ ಹೆಣ್ಣಿಗೂ ಮತ್ತು ಗಂಡಿಗೂ ಇಷ್ಟವಾದ ಹೂವಾಗಿದೆ.

ಹೆಣ್ಣು ಮಕ್ಕಳಿಗೆ ತಲೆಯಲ್ಲಿ ಹೂ ಇದ್ದರೆ ಚಂದ ಎಂದು ಇಟ್ಟುಕೊಂಡರೆ ಗಂಡು ಮಕ್ಕಳು ತಮ್ಮ ಮಡದಿಗೆ ತಲೆಯಲ್ಲಿ ತಮ್ಮ ಕೈ ಹಾರೆ ಹೂ ಹಿಟ್ಟು ತಮ್ಮ ಖುಷಿಯನ್ನು ವ್ಯಕ್ತಪಡಿಸುತ್ತಾರೆ. ಇನ್ನೂ ಯೌವ್ವನ ಹುಡುಗರು ತಮ್ಮ ಪ್ರೇಯಸಿಗೆ ಮಲ್ಲಿಗೆ ಹೂವನ್ನು ಕೊಡುವುದರ ಮುಖಾಂತರ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುತ್ತಾರೆ.

ಮಲ್ಲಿಗೆ ಹೂಗಳಲ್ಲಿ ಹಲವಾರು ವಿಧಗಳು ಕಾಣ ಬಹುದಾಗಿದೆ.ಅವುಗಳೆಂದರೆ ಸೂಜು ಮಲ್ಲಿಗೆ, ದುಂಡು ಮಲ್ಲಿಗೆ, ಜಾಜಿ ಮಲ್ಲಿಗೆ, ಮೈಸೂರು ಮಲ್ಲಿಗೆ, ಮಂಗಳೂರು ಮಲ್ಲಿಗೆ, ಏಳು ಸುತ್ತಿನ ಮಲ್ಲಿಗೆ, ಜ್ಯಾಸ್ಮೀನ್, ಹೀಗೆ ಹಲವಾರು ಮಲ್ಲಿಗೆ ಹೂಗಳನ್ನು ಕಾಣುತ್ತೇವೆ.

ಮಲ್ಲಿಗೆ ಹೂವನ್ನು ನಾವು ಸೇಂಟ್ಗಳನ್ನಾಗಿ ತಯಾರಿಸುತ್ತೇವೆ ಆಯುರ್ವೇದಿಕ ಗಿಡಮೂಲಿಕೆಗಳಿಂದ ತಯಾರಿಸಲು ಉಪಯೋಗಿಸುತ್ತೇವೆ, ಮಲ್ಲಿಗೆ ಹೂ ತಲೆ ನೋವಿಗೆ ಬಹಳ ಉಪಯುಕ್ತವಾದದ್ದು, ಅಷ್ಟೇ ಅಲ್ಲದೆ ಚರ್ಮದ ಸೌಂದರ್ಯವನ್ನು ಕಾಪಾಡುವಿಕೆ, ಮಲ್ಲಿಗೆ ಹೂ ವಾಸನೆ ಸ್ವಲ್ಪ ಸಮಯದವರೆಗೂ ವಿಶ್ರಾಂತಿಯನ್ನು ನೀಡುತ್ತದೆ.



ಮಲ್ಲಿಗೆ ಹೂವು ಎಲ್ಲಾ ಹೂಗಳಿಗೆ ರಾಣಿ ಎಂದೇ ಹೇಳಬಹುದಾಗಿದೆ ಮಲ್ಲಿಗೆ ಹೂವು ತೋಟದಲ್ಲಿ ಮಾತ್ರ ಬೆಳಸದೆ ಮನೆಯ ಮುಂದೆ ಸಹ ಮಲ್ಲಿಗೆ ಬೆಳೆಸುತ್ತಾರೆ ಏಕೆಂದರೆ ಮಲ್ಲಿಗೆ ಜನರು ಮನಸೋತಿದ್ದಾರೆ ಮಲ್ಲಿಗೆ ವಾಸನೆ ಒತ್ತಡಕ್ಕೆ ವಿಶ್ರಾಂತಿಯನ್ನು ತಂದು ಕೊಡುವುದಾಗಿದೆ.

ಜಾಸ್ಮಿನ್ ಹೂವನ್ನು ನಾವು ನಂಜು ಗುಂಜು ಮಾಡಿ ತಲೆಗೆ ಹಚ್ಚುವ ಹೆಣ್ಣಿಗೆ ಬೆರೆಸಿ ಕೂದಲಿಗೆ ಹಚ್ಚಿಕೊಳ್ಳುವುದು ಸಹ ನೋಡಬಹುದು ತಲೆಗೆ ಹಚ್ಚುವುದರಿಂದ ಎಲೆಯ ಕೂದಲು ದಟ್ಟತೆ ಮತ್ತು ದೃಢತೆಯಿಂದ ಬೆಳೆಯುವುದು. ಮಲ್ಲಿಗೆಯಿಂದ ತಯಾರಿಸಿದ ಶಾಂಪೂ ಸಹ ಈಗಿನ ದಿನಮಾನಗಳಲ್ಲಿ ಕಾಣಬಹುದಾಗಿದೆ.

ಮಲ್ಲಿಗೆ ಹೂವು ನಮ್ಮ ದೇಹಕ್ಕೆ ಬಹಳ ಆರೋಗ್ಯಕರವಾದದ್ದು ಎಂದು ಹೇಳಬಹುದು ಬೊಜ್ಜು ಬೆಳೆಯದಿರುವ ಜನರಿಗೆ ಆ ಬೊಜ್ಜನ್ನು ಇಳಿಸಲು ಸಹಾಯವನ್ನು ಮಾಡುತ್ತದೆ. ನಾವು ಕುಡಿಯುವ ನೀರಿನಲ್ಲಿ ಅಂದರೆ ಬಿಸಿ ಇರುವಾಗಲೇ ಅದರಲ್ಲಿ ಮಲ್ಲಿಗೆಯನ್ನು ಹಾಕಿ ಕುದಿಸಿ ಕುಡಿಯುವುದು ಇದರಿಂದ ನಮ್ಮ ದೇಹದ ತೂಕವನ್ನು ಇಳಿಸಬಹುದಾಗಿದೆ.

ಮಲ್ಲಿಗೆ ಹೂಗಳನ್ನು ಮದುವೆ ಕಾರ್ಯಕ್ರಮದಲ್ಲಿ ಹಾಗೂ ಶಾಂತಿ ಮುಹೂರ್ತ ಕಾರ್ಯಕ್ರಮಕ್ಕೆ ಮುಖ್ಯವಾದದ್ದು ಅಷ್ಟೇ ಅಲ್ಲದೆ ಹುಟ್ಟಿದಾಗ ನಾಮಕರಣಕ್ಕೆ ಸತ್ತಾಗ ದೇಹದ ಮೇಲೆ ಹಾಕುವುದಕ್ಕೆ ಮತ್ತು ಗೌರಿ ಹುಣ್ಣಿಮೆಯ ದಿನ ಎಲ್ಲಾ ಹೆಣ್ಣು ಮಕ್ಕಳ ತಲೆಯ ಮೇಲೆ ಮಲ್ಲಿಗೆ ಹೂವು ಇದ್ದರೆ ಚಂದ ಅಷ್ಟೇ ಅಲ್ಲದೆ ಮಲ್ಲಿಗೆಯಿಂದ ಮಗ್ಗಿ ಜಡೆಯನ್ನು ತಯಾರಿಸುವುದು ಇದು ಮದುವೆ ಸಮಾರಂಭದಲ್ಲಿ ಬಹಳ ಮುಖ್ಯವಾಗಿದೆ. ನಾವು ಹೆಣ್ಣು ಗಂಡು ನೋಡಲು ಹೋದಾಗ ಹಿಂದೂ ಸಂಪ್ರದಾಯದ ಪ್ರಕಾರವು ಬಹಳ ಮುಖ್ಯವಾದದ್ದು ಎಂದು ಹೇಳಬಹುದು.

ಜೇನುನೊಣಕ್ಕೆ ಇಷ್ಟವಾದವು ಎಂದರೆ ಮಲ್ಲಿಗೆ ಹೂ ಎಂದು ಸಹ ಹೇಳಬಹುದು. ಮಲ್ಲಿಗೆಯ ಮಧ್ಯಭಾಗದಲ್ಲಿ ಮಕರಂದವನ್ನು ಹೀರಿ ಜೇನು ಇಡುವುದರ ಮುಖಾಂತರ ಎಲ್ಲರಿಗೂ ಸಿಹಿಯನ್ನು ಹಂಚುತ್ತದೆ ಎನ್ನಬಹುದು.

**■ ರೇಣುಕಾ, ಪತ್ರಿಕೋದ್ಯಮ ವಿದ್ಯಾರ್ಥಿ**
**ಕೊಪ್ಪಳ ವಿಶ್ವವಿದ್ಯಾಲಯ**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**–: ಸಂಪಾದಕರು :–**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಪ್ರಾಪಂಚಿಕ ಪರಾಕಷ್ಟಗಳ ನಡುವೆ ಪ್ರಾಮಾಣಿಕತೆ

ಪ್ರಾಮಾಣಿಕತೆ ಎಂದರೇನು? ಅದನ್ನು ಖರೀದಿ ಮಾಡಿ ಬೇಕಾದಷ್ಟು ಗಳಿಸುವ ವಸ್ತುವಲ್ಲ. ಅದು ಸಂಸ್ಕಾರದಿಂದ, ಗುರು ಹಿರಿಯರಿಂದ, ಓದಿ ತಿಳಿಯುವದರಿಂದ ಮತ್ತು ಅನುಭವದಿಂದ ಮನದಾಳದಲ್ಲಿ ಮೂಡಿಸಿಕೊಂಡು ತನ್ನ ಸ್ವಂ ಸ್ವಭಾವದಲ್ಲಿ ಅಳವಡಿಸಿಕೊಂಡು ಬಹಳ ಕಾಲ ಬದುಕು ಸಾಗಿಸಿದಾಗ, ಇನ್ನೊಬ್ಬರು, ಬಹುಜನರು ಅವರುಗಳಿಗೆ ಆದ ಅನುಭವಗಳನ್ನು ಆಧರಿಸಿ ಕೊಡಮಾಡುವ ಮಾತಿನ ಪ್ರಶಸ್ತಿ. ಅದು ಜೀವಿತಾವಧಿಯಲ್ಲಿ ಸಿಗಬಹುದು ಅಥವಾ ಮರಣೋತ್ತರವೂ ಲಭಿಸಬಹುದು. ಇರಲಿ.

ಸಾಮಾನ್ಯವಾಗಿ ಪ್ರಾಮಾಣಿಕತೆ ಎಂದರೆ, ಸುಳ್ಳು ಹೇಳದೇ, ಮೋಸಮಾಡದೇ, ಭ್ರಷ್ಟಾಚಾರ ಮಾಡದೇ, ಇನ್ನೊಬ್ಬರಿಗೆ ನೋವು ಕೊಡದೇ ಅನೇಕ ಕೆಟ್ಟ ಮತ್ತು ಒಳ್ಳೆಯ ವಿಮರ್ಶೆಗಳ ಮಧ್ಯಯೂ ನಿಷ್ಠೆಯಿಂದ ತಮ್ಮ ಪಾಡಿಗೆ ತಮ್ಮ ಕೆಲಸಗಳನ್ನು ಮಾಡುತ್ತ ಬರುವ ವ್ಯಕ್ತಿಯ ಸ್ವಭಾವಕ್ಕೆ ಪ್ರಾಮಾಣಿಕ ಎನ್ನುವ ವಾಡಿಕೆ.

ಪುರಾಣ, ಇತಿಹಾಸ, ಕಥೆ ಕಾದಂಬರಿಗಳಲ್ಲಿ ಒಳ್ಳೆಯ ವ್ಯಕ್ತಿಯನ್ನು ಬಿಂಬಿಸುವಾಗ, ಓದುಗ ಅಥವಾ ವೀಕ್ಷಕರಿಗೆ ಉತ್ತಮ ಪ್ರಭಾವ ಬೀರಿ ಸಮಾಜಿಕ ಸುಧಾರಣೆ ಆಗಲಿ ಎಂದು ಈ ಪ್ರಮಾಣಿಕ ಶಬ್ದವನ್ನು ಬಳಸಿಯೇ ಬಳಸುತ್ತಾರೆ.

ಆದರೆ ಪ್ರಸ್ತುತ ಪ್ರಾಪಂಚಿಕ ವಿಷಯ ಸಂದರ್ಭದ ಸಮಯದಲ್ಲಿ ಇದಕ್ಕೆ ಅರ್ಥವೇ ಇಲ್ಲ ಎನ್ನುವಂತಾಗಿದೆ. ಯಕೆಂದರೆ ಈ ಪ್ರಾಮಾಣಿಕತೆಗೆ ಪರಕೀಯರ ದುಷ್ಟ ಪ್ರಭಾವ ಹೆಚ್ಚಾಗಿರುತ್ತದೆ. ಅದರಿಂದ ಪ್ರಮಾಣಿಕರಿಗೆ ಪರಾಕಷ್ಟಗಳು ಹೆಚ್ಚು. ಇದಕ್ಕೆ ಪರಕೀಯರಲ್ಲಿರುವ ಮತ್ಸರ,ದುರದ್ದೇಶ,ಅವರ ಸ್ವಾರ್ಥ ಸ್ವಭಾವಗಳೇ ಕಾರಣವೆನ್ನಬಹುದು. ಇದು ಪ್ರಾಮಾಣಿಕ ವ್ಯಕ್ತಿಯ ಮೇಲೆ ಪರಿಣಾಮ ಬೀರಿ, "ನಾವು ಹ್ಯಾಗೆ ಎಷ್ಟು ಸರಿ ಇದ್ದರೇನು? ನಮಗೆ ಕಷ್ಟ ತಪ್ಪಿದ್ದಲ್ಲ. ನಾವ್ಯಾಕೆ ಸುಮ್ಮನಿರಬೇಕು?" ಎಂದು ಪ್ರತೀಕಾರದ ಹೆಜ್ಜೆ ಇಡುವ ಸಂದರ್ಭ ಬರಲೂಬಹುದು. ಹಾಗಾಗಿ ಇದು ಕೇವಲ ಪುಸ್ತಕ ಭಾಷೆ, ಪಾಠ ಪ್ರವಚನ, ಭಾಷಣಗಳಿಗೆ ಮಾತ್ರ ಸಿಮೀತ ಶಬ್ದವಾಗಿದೆಯೇನೋ ಅನ್ನಿಸುತ್ತದೆ.

ಒಬ್ಬ ವ್ಯಕ್ತಿ ಅಥವಾ ಕುಟುಂಬಸ್ಥರಿಗೆ ಈ ಅನಿಸಿಕೆ ಬರಲು ಕಾರಣವೇನೆಂದರೆ, ಅವರು ತಮಗೆ ಸಾಧ್ಯವಾದ ಪ್ರಾಮಾಣಿಕತೆ ಮೂಲಕ ಇದ್ದರೂ ಪರಕೀಯರ ಕಿರಿಕಿರಿ ಅತೀಯಾದಾಗ ಮಾನಸೀಕ ಹಿಂಸೆ ತಾಳಲಾರದೇ ತಾಳ್ಮೆ ಕಳೆದುಕೊಳ್ಳುತ್ತಾರೆ. ಅಲ್ಲಿಗೆ ಅವರ ಹಿಂದಿನ ಪ್ರಾಮಾಣಿಕತೆಯ ತಪಸ್ಸು ನಶಿಸಿ ಹೋದಂತಾಗುತ್ತದೆ. ಇದು ವ್ಯಕ್ತಿ ವ್ಯಕ್ತಿಗಳ, ದಾಯಾದಿಗಳ, ಕುಟುಂಬ ಕುಟುಂಬಗಳ, ಮತ್ತು ಸಂಘ ಸಂಘಗಳು ಎಲ್ಲಿಯಾದರೂ ಉದ್ಭವಿಸಬಹುದಾದ ಸಂದರ್ಭ ಬರುವುದು ಸಹಜ.



**ಲಕುಮಿಸುತ ಸಾರವಾಡ**
**ಮೊ: 9449598373**
Scan For Digital Colourful
HAMPI TIMES E-paper

ಹಾಗಾದರೆ ಇದಕ್ಕೆ ಪರಿಹಾರ ಇಲ್ಲವೇ? ಇದೆ ಖಂಡಿತಾ ಇದೆ. ಸಾತ್ವಿಕ, ಪ್ರಾಮಾಣಿಕ ಸ್ವಭಾವ ಹೊಂದಿದ ಬಹುತೇಕರು ಆಸ್ತಿಕರು ಅಥವಾ ತತ್ವ ಪಾಲಕರಾಗಿರುತ್ತಾರೆ. ಅದಕ್ಕಂತೆಯೇ ಯಾವುದಕ್ಕೂ ತಲೆ ಕೆಡಿಸಿಕೊಳ್ಳದೇ ಶೇ 90 ರಷ್ಟು



ಸಹಿಷ್ಣುತೆಯ ಸಮಯ ಕಳೆದಿರುತ್ತಾರೆ. ಕೊನೆಯ ಘಳಿಗೆಯಲ್ಲಿ ರೋಸಿ ಹೋಗಿ, ಪ್ರಚೋದನೆಗೆ ಒಳಗಾಗಿ, ಮಾನಸೀಕ ಸೀಮಿತವವನ್ನು ಕಳೆದುಕೊಂಡು ಪ್ರತೀಕಾರದ ಬಲೆಗೆ ಬೀಳುತ್ತಾರೆ. ಇಲ್ಲಿ, ಹಾಗೇ ಮಾಡದೇ ಅರ್ಥೈಸಿಕೊಳ್ಳುವುದೇನೆಂದರೆ, ಭಗವದ್ಗೀತೆಯಲ್ಲಿ (18/26) ಶ್ರೀಕೃಷ್ಣ ಪರಮಾತ್ಮ ಹೇಳಿದಂತೆ,

**"ಮುಕ್ತಸಂಗೋ ನಹಂವಾದೀ ಧೃತ್ಯುತ್ಸಾಹಸಮನ್ವಿತಃ।**
**ಸಿದ್ಧ್ಯಸಿದ್ಧ್ಯೋರ್ವ ನಿರ್ವಿಕಾರಃ**
**ಕಾರ್ತಾ ಸಾತ್ವಿಕ ಉಚ್ಯತೇ।"**

ಯಾರು ಸಂಗರಹಿತನಾಗಿ, ಅಹಂಕಾರವಿಲ್ಲದೆ, ಪ್ರಾಮಾಣಿಕವಾಗಿ, ಧೈರ್ಯದಿಂದ, ನಂಬಿಕೆಯ ಪ್ರಯತ್ನದೊಡನೆ, ಯಶಸ್ಸು ಅಥವಾ ವಿಫಲತೆ ಏನೇ ಬಂದರೂ ಏತನ್ಮಧ್ಯೇಯೂ ಸಮಭಾವದಿಂದ ಕೆಲಸ ಮಾಡುತ್ತಾರೋ, ಅಂತವರು ಸಾತ್ವಿಕ, ಶ್ರೇಷ್ಠ, ಪ್ರಮಾಣಿಕ ಕರ್ಮಯೋಗಿಗಳು ಎಂದೆನಿಸಿಕೊಳ್ಳುತ್ತಾರೆ.

ಹಾಗಿದ್ದಾಗ ಅಧೈರ್ಯ ಹೊಂದುವುದೇಕೆ? ದ್ವೇಷಿಗಳು ಕ್ಷಣಿಕ ಆನಂದ ಅನುಭವಿಸುತ್ತಿರುತ್ತಾರೆ. ದೈವತ್ವದ ಮನಸ್ಸು ಹೊಂದಿವರು ಜೀವನ ಏನೆಂದು ಅರಿತಿರುತ್ತಾರೆ. ಬರುವಾಗ ಏನನ್ನು ತಂದಿಲ್ಲ. ಹೋಗುವಾಗ ಏನನ್ನೂ ಕೊಂಡೊಯ್ಯಲಾಗಲ್ಲ. ಪ್ರಾಮಾಣಿಕರು ಅದೆಷ್ಟು ಸಂಕಷ್ಟದಲ್ಲಿದ್ದರೂ ಅವರ ಮನದಲ್ಲಿ "ಅವರು ದೂಷಿಸುವಂತೆ ನಾನೇನೂ ಮಾಡಿಲ್ಲ" ಎಂಬ ಆತ್ಮ ವಿಶ್ವಾಸದ ಶಕ್ತಿ ನೆಮ್ಮದಿಯನ್ನು ಮೂಢಿಸಿಕೊಳ್ಳಬೇಕು. ಆದರೆ ದ್ವೇಷ ಅಸೂಯಿಂದ ಕಿರಿಕಿರಿ ಕೊಡುವ ಜನರು ಮೆಲ್ನೋಟಕ್ಕೆ ಸಂತುಷ್ಟಿ ಎನಿಸಿದರೂ, "ನಾನು ಹೀಗೆ ಮಾಡಬಾರದಿತ್ತು !! ನನಗೆ ಮುಂದೇನಾಗುತ್ತದೆ?" ಎನ್ನುವ ಚಿಂತೆ ಆ ದ್ವೇಷಿಗಳ ಮನದಾಳದಲ್ಲಿ ಸದಾ ಕಾಡುತ್ತಿರುತ್ತದೆ. ಒಣ ಪ್ರತಿಷ್ಠೆಗಾಗಿ ಯಾರ ಮುಂದೆಯೂ ಹೇಳಿ ಕೊಳ್ಳದೇ ದಿಮಾಕಿನ ಬದುಕು ಸಾಗಿಸುತ್ತಿರುವುದು ಸತ್ಯ. ಇಂತಹ ಸಂದರ್ಭದಲ್ಲಿ ತಾಳ್ಮೆ ಕಳದು ಕೊಳ್ಳದೇ, ಆ ಮಾತುಗಳನ್ನು ನಿರ್ಲಕ್ಷಿಸಿ ಯಾವ ಪ್ರತೀಕಾರ ವನ್ನೂ ಕೊಡದೇ, ಧೈರ್ಯದಿಂದ ತಮ್ಮ ನಿತ್ಯ ಕರ್ತವ್ಯದೊಂದಿಗೆ ಭಗವಂತನನ್ನು ನಂಬಿ ಯೋಗ ಧ್ಯಾನಾದಿ ಸತ್ಸಂಗಲ್ಲಿ ತೊಡಗಿಕೊಂಡರೆ ಸಾಕು. ಸಮಯಕಳೆದಂತೆ ಫಲಿತಾಂಶವು ಖಂಡಿತಾ ಪ್ರಾಮಾಣಿಕರ ಪರವಾಗಿಯೇ ಬರುತ್ತದೆ. ಆಗಲೂ ಪ್ರಮಾಣಿಕರು ಬೀಗಲಾರದೇ, ದ್ವೇಷಿಸಿದವರನ್ನು ದೂಷಿಸದೇ ಭಗವಂತನ ಇಚ್ಛೆ ಎಂದು ಬದುಕು ಸಾಗಿಸಬೇಕು.

# ಅರಿತು ಬಾಳಲು ಜನ್ಮ ಸಾರ್ಥಕ

## ಅತಿಯಾದ ವಿಚ್ಛೇದನಕ್ಕೆ ಕಾರಣವಾದರೂ ಎನು? । ವಿಚ್ಛೇದನ ತಗ್ಗಲು ಬೇಕಿದೆ ಮುಂಜಾಗ್ರತೆ

ವಿಚ್ಛೇದನಕ್ಕೆ ವಿವಾಹವೇ ಕಾರಣ ಎನ್ನುವದೊಂದು ಹಳೆಯ ಜೋಕ್. ಆದರೆ ವಿವಾಹ ಆಗೋದೇ ವಿಚ್ಛೇದನಕ್ಕೆ ಎನ್ನುವುದು ಇತ್ತೀಚಿನ ಟ್ರೆಂಡ್. ಹೆಚ್ಚಾನು ಹೆಚ್ಚು ವಿವಾಹಗಳು ವಿಚ್ಛೇದನದಲ್ಲಿ ಕೊನೆಗೊಳ್ಳುತ್ತವೆ. ಹಾಗಾದರೆ ಅತಿಯಾದ ವಿಚ್ಛೇದನಕ್ಕೆ ಕಾರಣವಾದರೂ ಎನು? ಪ್ರೀತಿ, ಸಾಮರಸ್ಯದಿಂದ ಬಾಳಬೇಕಾದ ಗಂಡ ಹೆಂಡತಿಯರಲ್ಲಿ ಉಂಟಾಗುವ ಅಹಂಭಾವವೇ ಕಾರಣ. ಒಂದಂತೂ ಸತ್ಯ. ವಿಚ್ಛೇದನವಾಗಿರುವ ಪ್ರಕರಣಗಳಲ್ಲಿ ಪ್ರೇಮ ವಿವಾಹಗಳೇ ಹೆಚ್ಚು ಎಂಬ ಸತ್ಯವನ್ನು ಒಪ್ಪಲೇಬೇಕು. ಹಾಗಂತ ವಿರಳಾತಿ ವಿರಳ ಹಿರಿಯರು ನಿಶ್ಚಯಿಸಿದ ಮದುವೆಯಲ್ಲಿಯೂ ವಿಚ್ಛೇದನ ಆಗಿವೆ. ಹಿರಿಯರ ನಿಗಾ ಇದ್ದಾಗ್ಯೂ ಕೂಡಾ ಈ ಹಂತ ತಲುಪಲು ಅವರೊಳಗೆ ಇರಬೇಕಾದ ಬದ್ಧತೆಯ ಕೊರತೆಯೇ ಕಾರಣ.


ಇದು ತೀರಾ ಆತಂಕಕಾರಿ ಬೆಳವಣಿಗೆ. ವಿಚ್ಛೇದನಕ್ಕೆ ನೀಡುವ ಕಾರಣಗಳು ಇನ್ನೂ ಅರ್ಥವಿಲ್ಲದ್ದಿರುತ್ತವೆ. ಇದಕ್ಕೆ ಸೀಮಿತವಾದ ಯಾವುದೇ ಧರ್ಮ ಅಥವಾ ಪಂಗಡಗಳಲ್ಲಿ ಆಗುವದಿಲ್ಲ. ‘ನಮ್ಮ ಕಾಲದಲ್ಲಿ ಹೀಗಿರಲಿಲ್ಲವಪ್ಪಾ, ನಮ್ಮ ಸಂಗಾತಿಗಳ ಮುಖ ನೋಡಿದ್ದೇ ಮದುವೆ ಮಂಟಪದಲ್ಲಿ. ಎನೊಂದೂ ಆರಿಸದೇ ಅವರು ಹೇಳಿದವರನ್ನು ವರಿಸಿ ಎಷ್ಟೊಂದು ಅನ್ಯೋನ್ಯವಾಗಿದ್ದೇವೆ. ಆದರೆ ಈಗಿನವರು ಮದುವೆಗೆ ಮುಂಚೆ ಕೂಡಿ ಓಡಾಡಿ ಒಬ್ಬರನ್ನೊಬ್ಬರು ಒಪ್ಪಿ ಈಗ ಮದುವೆಯಾದ ಬಳಿಕ ಬೇರೆಯಾಗಿದ್ದಾರೆ. ಏನಿದರರ್ಥ?’ ಎಂದು ಹೇಳುವದುಂಟು. ಒಂದು ಅಧ್ಯಯನದ ಪ್ರಕಾರ ಪ್ರೇಮ ವಿವಾಹ ವೈಫಲ್ಯಕ್ಕೆ ವಿವಾಹಪೂರ್ವ ಪ್ರೇಮವೇ ಕಾರಣ ಎಂದು ಹೇಳಲಾಗುತ್ತದೆ.



**ಭೋಜರಾಜ ಸೊಪ್ಪಿಮಠ**
**9743388911**
Scan For Digital Colourful
HAMPI TIMES E-paper

ಮದುವೆಗೆ ಮೊದಲು ತಮ್ಮ ಸಂಗಾತಿಗಳಲ್ಲಿ ಕಂಡು ಬರುವ ಒಳ್ಳೆಯ ವಿಷಯಗಳನ್ನೆಲ್ಲಾ ಹೆಮ್ಮೆಯಿಂದ ಹೇಳಿಕೊಳ್ಳುತಿದ್ದವರು ಮದುವೆ ನಂತರ ಅವರಲ್ಲಿ ಸಣ್ಣ ಪುಟ್ಟ ತಪ್ಪುಗಳೇ ಪ್ರಮುಖವಾಗಿ ಕಾಣಲು ಆರಂಭವಾಗುತ್ತವೆ. ಇದು ಪರಸ್ಪರರಲ್ಲಿ ಮನಸ್ತಾಪ ಬೆಳೆಯಲು ಕಾರಣವಾಗುತ್ತದೆ. ವಿವಾಹ ನಂತರ ದಂಪತಿಗಳಲ್ಲಿ ಪ್ರೇಮ ಹುಟ್ಟಿಕೊಂಡರೆ ಅದು ಶಾಶ್ವತವಾಗಿ ಇರಬಲ್ಲದು ಎಂದು ಕೆಲ ಪರಿಣಿತರು ಹೇಳುತ್ತಾರೆ. ಒಟ್ಟಾರೆ ಹಿರಿಯರು ಹೇಳುವ ಮಾತು ಹಾಗೂ ಪರಿಣಿತರ ಅಭಿಪ್ರಾಯ ಕ್ರೋಢೀಕರಿಸುವದಾದರೆ ವಿವಾಹದ ನಂತರವೇ ಪ್ರೇಮ ಬೆಳೆದರೆ ಚನ್ನ ಮತ್ತು ಹೆಚ್ಚು ಬಾಳಿಕೆ ಬಾಳಬಲ್ಲದು.

ನಮ್ಮ ದೇಶದ ವಿವಾಹ ಎರಡು ವ್ಯಕ್ತಿಗಳ ನಡುವಿನ ಸಂಬಂಧಕ್ಕಿಂತಲೂ ಎರಡು ಕುಟುಂಬಗಳ ನಡುವೆ ನಡೆಯುವ ಬಂಧನಕ್ಕೆ ಮಹತ್ವ ಕೊಡಲಾಗುತ್ತದೆ. ಪ್ರೇಮ ವಿವಾಹದಲ್ಲಿ ಇಬ್ಬರು ವ್ಯಕ್ತಿಗಳ ನಡುವೆ ಮಾತ್ರ ಒಡಂಬಡಿಕೆ ಮತ್ತು ಭಾವನೆಗಳು ಮೂಡಿರುತ್ತವೆ. ಸಂಗಾತಿಗಳ ಹಿರಿಯರೊಂದಿಗೆ ಸಂಪರ್ಕವೇ ಇರುವದಿಲ್ಲ. ಅತಿ ಹೆಚ್ಚು ಪ್ರೇಮ ವಿವಾಹಗಳು ಮನೆಯನ್ನು ಬಿಟ್ಟು ಓಡಿ ಬಂದು ಯಾರದೋ ಸಮ್ಮುಖದಲ್ಲಿ ಮದುವೆ ಆಗಿರುತ್ತದೆ. ಅದಕ್ಕೆ ಯಾವುದೇ ಹಿರಿಯರ, ಬಂಧುಗಳ ಪ್ರೋತ್ಸಾಹ, ಸಹಾಯ ಇರುವದಿಲ್ಲ. ಆಗೊಂದು ವೇಳೆ ಭಿನ್ನಾಭಿಪ್ರಾಯ ಉಂಟಾದರೆ ಮನೆಯವರನ್ನು ಬಿಟ್ಟಿರಲಾರದೇ ಸಂಗಾತಿಗಳೊಂದಿಗೆ ಹೊಂದಿ ಕೊಳ್ಳಲಾಗದೇ ತೊಳಲಾ ಡುತ್ತಾರೆ.



ಇತ್ತೀಚಿಗೆ ಡೇಟಿಂಗ್ ವ್ಯವಸ್ಥೆ ಬಂದಿದ್ದು, ಅದಂತೂ ನಮ್ಮ ಸಂಸ್ಕೃತಿ, ಸಭ್ಯತೆ, ಸಂಪ್ರದಾಯದ ಮೇಲೆ ಪೆಟ್ಟು ನೀಡುತ್ತದೆ. ಕೇವಲ ವಯಸ್ಸು, ಸೌಂದರ್ಯ ಅಥವಾ ಇನ್ನಾವುದೋ ಆಕರ್ಷಣೆ ಯಿಂದ ಎದುರಿನವರನ್ನು ಚಲ್ಲಾಟವಾಡಿಸುವ, ದೈಹಿಕ ಸಂಪರ್ಕ ಬಳಸಿ ದೂರಾಗುವ ಉದ್ದೇಶ ಇರುತ್ತದೆ. ಇವರಿಗೆ ಮದುವೆಯಾಗಲೇಬೇಕು ಎಂಬ ಯಾವುದೇ ಮಾರ್ಗಸೂಚಿ ಇರುವದಿಲ್ಲ. ಕಾಟಾಚಾರಕ್ಕೆ ಮದುವೆ ಆಗಲೂಬಹುದು. ಅದಕ್ಕೆ ಯಾರ ನೈತಿಕ ಬೆಂಬಲವೂ ಇರುವದಿಲ್ಲ.

ಮದುವೆ ಆಟವಲ್ಲ. ಅದೊಂದು ಋಣಾನು ಬಂಧ. ನಮ್ಮ ಹಾಗೂ ನಮ್ಮಿಂದ ಜನ್ಮ ತಳೆದ ಮಕ್ಕಳ ಭವಿಷ್ಯಕ್ಕಾಗಿ ಅವಿರತ ಪ್ರಯತ್ನಿಸಬೇಕಾದ ಹೊಣೆ. ಪತಿ ಪತ್ನಿ ಇಬ್ಬರೂ ಸಾಮರಸ್ಯದಿಂದ ನಡೆದಾಗಲೇ ಜೀವನ ಸರಳವಾಗಿ ನಡೆಯಲು ಸಾಧ್ಯ. ಸಂಪ್ರದಾಯಬದ್ಧ ಮದುವೆಯಾಗಿರಲಿ, ಪ್ರೇಮ ವಿವಾಹವೇ ಇರಲಿ ಹೊಂದಿಕೊಂಡು ಬಾಳತಕ್ಕ ಜೋಡಿಯಲ್ಲಿ ತಿಳುವಳಿಕೆ, ಅರ್ಥೈಸಿ ಕೊಳ್ಳುವುದು ಇದ್ದಲ್ಲಿ ತೊಂದರೆ ಅಬಾಧಿತ. ಒಂದು ಕಳ್ಳ ನೆಪಕ್ಕಾಗಿ ಕಾಯುವಂತಾದ ಕುಟುಂಬ ದಲ್ಲಿ ಸಾಮರಸ್ಯ ಇಲ್ಲವಾಗಿ ಅದು ಮುಂದಿನ ಪೀಳಿಗೆಗೂ ಪರಿಣಾಮಕಾರಿ ಆಗಬಲ್ಲದು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

ಭಾರತದ ಬಾಹ್ಯಾಕಾಶ ದೃಷ್ಟಿಕೋನವು 'ವಸುದೈವ ಕುಟುಂಬಕಂ' ಎಂಬ ಪ್ರಾಚೀನ ತತ್ವಶಾಸ್ತ್ರದಲ್ಲಿ ಬೇರೂರಿದೆ

# ಬಾಹ್ಯಾಕಾಶದಲ್ಲಿ ಮಹಿಳಾ ಶಕ್ತಿ

**ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿಕೆ । ಬಾಹ್ಯಾಕಾಶ ಅನ್ವೇಷಣೆ ಕುರಿತ ಜಾಗತಿಕ ಸಮ್ಮೇಳನ (ಜಿಎಲ್‌ಇಎಕ್ಸ್) 2025**

**ಬಾಹ್ಯಾಕಾಶವು ಕೇವಲ ಗಮ್ಯಸ್ಥಾನವಲ್ಲ, ಅದು ಕುತೂಹಲ, ಧೈರ್ಯ ಮತ್ತು ಸಾಮೂಹಿಕ ಪ್ರಗತಿಯ ಘೋಷಣೆಯಾಗಿದೆ**

**ಭಾರತೀಯ ರಾಕೆಟ್‌ಗಳು ಪೇಲೋಡ್‌ಗಳಿಗಿಂತ ಹೆಚ್ಚಿನದನ್ನು ಸಾಗಿಸುತ್ತವೆ। 1.4 ಶತಕೋಟಿ ಭಾರತೀಯ ಕನಸು ಹೊತ್ತೊಯ್ಯುತ್ತವೆ**

**ದೆಹಲಿ:** ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಬುಧವಾರ ವಿಡಿಯೋ ಕಾನ್ಫರೆನ್ಸ್ ಮೂಲಕ ಬಾಹ್ಯಾಕಾಶ ಅನ್ವೇಷಣೆ ಕುರಿತ ಜಾಗತಿಕ ಸಮ್ಮೇಳನ (ಜಿಎಲ್‌ಇಎಕ್ಸ್) 2025ನ್ನು ಉದ್ದೇಶಿಸಿ ಭಾಷಣ ಮಾಡಿದರು. ವಿಶ್ವದಾದ್ಯಂತ ಗೌರವಾನ್ವಿತ ಪ್ರತಿನಿಧಿಗಳು, ವಿಜ್ಞಾನಿಗಳು ಮತ್ತು ಗಗನಯಾತ್ರಿಗಳನ್ನು ಸ್ವಾಗತಿಸಿದ ಅವರು, ಜಿಎಲ್‌ಇಎಕ್ಸ್ 2025ರಲ್ಲಿ ಭಾರತದ ಗಮನಾರ್ಹ ಬಾಹ್ಯಾಕಾಶ ಪ್ರಯಾಣವನ್ನು ಪ್ರಸ್ತಾಪಿಸಿದ ಅವರು "ಬಾಹ್ಯಾಕಾಶವು ಕೇವಲ ಒಂದು ಗಮ್ಯಸ್ಥಾನವಲ್ಲ ಜೊತೆಗೆ ಅದು ಕುತೂಹಲ, ಧೈರ್ಯ ಮತ್ತು ಸಾಮೂಹಿಕ ಪ್ರಗತಿಯ ಘೋಷಣೆಯಾಗಿದೆ" ಎಂದು ಹೇಳಿದರು.

1963ರಲ್ಲಿ ಸಣ್ಣ ರಾಕೆಟ್ ಉಡಾವಣೆಯಿಂದ ಹಿಡಿದು ಚಂದ್ರನ ದಕ್ಷಿಣ ಧ್ರುವದ ಬಳಿ ಇಳಿದ ಮೊದಲ ರಾಷ್ಟ್ರವಾಗುವವರೆಗೆ ಭಾರತದ ಬಾಹ್ಯಾಕಾಶ ಸಾಧನೆಗಳು ಈ ಸ್ಫೂರ್ತಿಯನ್ನು ಪ್ರತಿಬಿಂಬಿಸುತ್ತವೆ ಎಂದು ಅವರು ಒತ್ತಿ ಹೇಳಿದರು. "ಭಾರತೀಯ ರಾಕೆಟ್ ಗಳು ಪೇಲೋಡ್ ಗಳಿಗಿಂತ (ಸಾಮರ್ಥ್ಯಕ್ಕಿಂತ) ಹೆಚ್ಚಿನದನ್ನು ಸಾಗಿಸುತ್ತವೆ – ಅವು 1.4 ಬಿಲಿಯನ್ ಭಾರತೀಯರ ಕನಸುಗಳನ್ನು ಹೊತ್ತೊಯ್ಯುತ್ತವೆ". ಭಾರತದ ಬಾಹ್ಯಾಕಾಶ ಪ್ರಗತಿಗಳು ಗಮನಾರ್ಹ ವೈಜ್ಞಾನಿಕ ಮೈಲಿಗಲ್ಲುಗಳಾಗಿವೆ ಮತ್ತು ಮಾನವ ಚೈತನ್ಯವು ಗುರುತ್ವಾಕರ್ಷಣೆಯನ್ನು ಮೀರಬಲ್ಲದು ಎಂಬುದಕ್ಕೆ ಪುರಾವೆಯಾಗಿದೆ. 2014 ರಲ್ಲಿ ಮೊದಲ ಪ್ರಯತ್ನದಲ್ಲೇ ಮಂಗಳ ಗ್ರಹವನ್ನು ತಲುಪಿದ ಭಾರತದ ಐತಿಹಾಸಿಕ ಸಾಧನೆಯನ್ನು ಅವರು ಸ್ಮರಿಸಿದರು. ಚಂದ್ರಯಾನ –1 ಚಂದ್ರನ ಮೇಲ್ಮೈಯಲ್ಲಿ ನೀರನ್ನು ಕಂಡುಹಿಡಿಯಲು ಸಹಾಯ ಮಾಡಿತು, ಚಂದ್ರಯಾನ–2 ಚಂದ್ರನ ಮೇಲ್ಮೈಯ ಅತಿ ಹೆಚ್ಚು ರೆಸಲ್ಯೂಶನ್ (ಸ್ಪಷ್ಟ) ಚಿತ್ರಗಳನ್ನು ಒದಗಿಸಿತು ಮತ್ತು ಚಂದ್ರಯಾನ–3 ಚಂದ್ರನ ದಕ್ಷಿಣ ಧ್ರುವದ ತಿಳುವಳಿಕೆಯನ್ನು ಹೆಚ್ಚಿಸಿತು ಎಂದರು.

"ಭಾರತವು ದಾಖಲೆಯ ಸಮಯದಲ್ಲಿ ಕ್ರಯೋಜೆನಿಕ್ ಎಂಜಿನ್‌ಗಳನ್ನು ಅಭಿವೃದ್ಧಿಪಡಿಸಿದೆ, ಒಂದೇ ಕಾರ್ಯಾಚರಣೆಯಲ್ಲಿ 100 ಉಪಗ್ರಹಗಳನ್ನು ಉಡಾವಣೆ ಮಾಡಿದೆ ಮತ್ತು ಭಾರತೀಯ ಉಡಾವಣಾ ವಾಹನಗಳನ್ನು ಬಳಸಿಕೊಂಡು 34 ದೇಶಗಳಿಗೆ 400 ಕ್ಕೂ ಹೆಚ್ಚು ಉಪಗ್ರಹಗಳನ್ನು ಯಶಸ್ವಿಯಾಗಿ ನಿಯೋಜಿಸಿದೆ" ಎಂಬುದರತ್ತ ಅವರು ಗಮನಸೆಳೆದರು. ಭಾರತದ ಇತ್ತೀಚಿನ ಸಾಧನೆಗಳತ್ತ ಬೆಟ್ಟು ಮಾಡಿದ ಅವರು ಈ ವರ್ಷ ಎರಡು ಉಪಗ್ರಹಗಳನ್ನು ಬಾಹ್ಯಾಕಾಶದಲ್ಲಿ ಸ್ಥಾಪಿಸಿರುವುದು ಬಾಹ್ಯಾಕಾಶ ಅನ್ವೇಷಣೆಯತ್ತ ಪ್ರಮುಖ ಹೆಜ್ಜೆಯಾಗಿದೆ ಎಂದರು.



ಭಾರತದ ಬಾಹ್ಯಾಕಾಶ ಪ್ರಯಾಣವು ಇತರರೊಂದಿಗೆ ಸ್ಪರ್ಧಿಸುವ ಇರಾದೆಯದ್ದಲ್ಲ, ಬದಲಿಗೆ ಒಟ್ಟಿಗೆ ಹೆಚ್ಚಿನ ಎತ್ತರವನ್ನು ತಲುಪುವ ಉದ್ದೇಶವಾಗಿದೆ ಎಂದು ಪುನರುಚ್ಚರಿಸಿದರು. ಮಾನವ ಕುಲದ ಪ್ರಯೋಜನಕ್ಕಾಗಿ ಬಾಹ್ಯಾಕಾಶವನ್ನು ಅನ್ವೇಷಿಸುವ ಸಾಮೂಹಿಕ ಗುರಿಯನ್ನು ಅವರು ಒತ್ತಿ ಹೇಳಿದರು. ಪ್ರಾದೇಶಿಕ ಸಹಕಾರಕ್ಕೆ ಭಾರತದ ಬದ್ಧತೆಯನ್ನು ಒತ್ತಿ ಹೇಳಿದ ಅವರು, ದಕ್ಷಿಣ ಏಷ್ಯಾದ ರಾಷ್ಟ್ರಗಳಿಗಾಗಿ ಉಪಗ್ರಹವನ್ನು ಯಶಸ್ವಿಯಾಗಿ ಉಡಾವಣೆ ಮಾಡಿರುವುದನ್ನು ಸ್ಮರಿಸಿದರು. ಭಾರತದ ಅಧ್ಯಕ್ಷೀಯ ಅವಧಿಯಲ್ಲಿ ಪರಿಚಯಿಸಲಾದ ಜಿ 20 ಉಪಗ್ರಹ ಮಿಷನ್ ಜಾಗತಿಕ ದಕ್ಷಿಣಕ್ಕೆ ಮಹತ್ವದ ಕೊಡುಗೆಯಾಗಲಿದೆ ಎಂದು ಘೋಷಿಸಿದರು. ವೈಜ್ಞಾನಿಕ ಅನ್ವೇಷಣೆಯ ಗಡಿಗಳನ್ನು ನಿರಂತರವಾಗಿ ತಳ್ಳುತ್ತಾ ಭಾರತವು ಹೊಸ ವಿಶ್ವಾಸದೊಂದಿಗೆ ಮುಂದುವರಿಯುತ್ತಿದೆ. "ಭಾರತದ ಮೊದಲ ಮಾನವ ಬಾಹ್ಯಾಕಾಶ ಯಾನ ಮಿಷನ್ 'ಗಗನಯಾನ' ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ರಾಷ್ಟ್ರದ ಹೆಚ್ಚುತ್ತಿರುವ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುತ್ತದೆ" ಎಂಬುದರತ್ತ ಅವರು ಗಮನಸೆಳೆದರು. ಮುಂಬರುವ ವಾರಗಳಲ್ಲಿ, ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಇಸ್ರೋ–ನಾಸಾ ಜಂಟಿ ಕಾರ್ಯಾಚರಣೆಯ ಭಾಗವಾಗಿ ಭಾರತೀಯ ಗಗನಯಾತ್ರಿಯೊಬ್ಬರು ಬಾಹ್ಯಾಕಾಶಕ್ಕೆ ಪ್ರಯಾಣಿಸಲಿದ್ದಾರೆ ಎಂದು ಬಹಿರಂಗಪಡಿಸಿದರು. 2035ರ ವೇಳೆಗೆ ಭಾರತೀಯ ಅಂತರಿಕ್ಷ ನಿಲ್ದಾಣ ಅದ್ಭುತ ಸಂಶೋಧನೆ ಮತ್ತು ಅಂತರರಾಷ್ಟ್ರೀಯ ಸಹಯೋಗಕ್ಕೆ ಅನುಕೂಲವಾಗಲಿದೆ ಎಂದು ಅವರು ಭಾರತದ ದೀರ್ಘಕಾಲೀನ ದೃಷ್ಟಿಕೋನವನ್ನು ವಿವರಿಸಿದರು. 2040ರ ವೇಳೆಗೆ, ಭಾರತೀಯ ಗಗನಯಾತ್ರಿ ಚಂದ್ರನ ಮೇಲೆ ಹೆಜ್ಜೆಗುರುತುಗಳನ್ನು ಮೂಡಿಸುತ್ತಾರೆ ಎಂದು ಘೋಷಿಸಿದ ಅವರು, ಮಂಗಳ ಮತ್ತು ಶುಕ್ರ, ಭಾರತದ ಭವಿಷ್ಯದ ಬಾಹ್ಯಾಕಾಶ ಮಹತ್ವಾಕಾಂಕ್ಷೆಗಳಲ್ಲಿ ಪ್ರಮುಖ ಗುರಿಗಳಾಗಿವೆ ಎಂದು ಹೇಳಿದರು.

ಭಾರತಕ್ಕೆ ಬಾಹ್ಯಾಕಾಶವು ಕೇವಲ ಅನ್ವೇಷಣೆ ಮಾತ್ರವಲ್ಲ, ಸಬಲೀಕರಣವೂ ಆಗಿದೆ ಎಂದ ಪ್ರಧಾನಿ, ಬಾಹ್ಯಾಕಾಶ ತಂತ್ರಜ್ಞಾನವು ಆಡಳಿತವನ್ನು ಹೇಗೆ ಹೆಚ್ಚಿಸುತ್ತದೆ, ಜೀವನೋಪಾಯವನ್ನು ಸುಧಾರಿಸುತ್ತದೆ ಮತ್ತು ಪೀಳಿಗೆಗಳಿಗೆ ಹೇಗೆ ಸ್ಫೂರ್ತಿ ನೀಡುತ್ತದೆ ಎಂಬುದನ್ನು ಎತ್ತಿ ತೋರಿಸಿದರು. ಮೀನುಗಾರರಿಗೆ ಮುನ್ನೆಚ್ಚರಿಕೆ, ಗತಿಶಕ್ತಿ ವೇದಿಕೆ, ರೈಲ್ವೆ ಸುರಕ್ಷತೆ ಮತ್ತು ಹವಾಮಾನ ಮುನ್ಸೂಚನೆಗೆ ಉಪಗ್ರಹಗಳ ಕೊಡುಗೆಗಳನ್ನು ಉಲ್ಲೇಖಿಸಿ, ಪ್ರತಿಯೊಬ್ಬ ಭಾರತೀಯನ ಕಲ್ಯಾಣವನ್ನು ಖಚಿತಪಡಿಸಿಕೊಳ್ಳುವಲ್ಲಿ ಉಪಗ್ರಹಗಳ ಪ್ರಮುಖ ಪಾತ್ರವನ್ನು ಅವರು ಉಲ್ಲೇಖಿಸಿದರು. ನವೋದ್ಯಮಗಳು, ಉದ್ಯಮಿಗಳು ಮತ್ತು ಯುವ ಮನಸ್ಸುಗಳಿಗೆ ಬಾಹ್ಯಾಕಾಶ ಕ್ಷೇತ್ರವನ್ನು ತೆರೆಯುವ ಮೂಲಕ ನಾವೀನ್ಯತೆಯನ್ನು ಉತ್ತೇಜಿಸುವ ಭಾರತದ ಬದ್ಧತೆಯನ್ನು ಅವರು ಒತ್ತಿ ಹೇಳಿದರು. ಭಾರತವು ಈಗ 250 ಕ್ಕೂ ಹೆಚ್ಚು ಬಾಹ್ಯಾಕಾಶ ನವೋದ್ಯಮಗಳನ್ನು ಹೊಂದಿದ್ದು, ಉಪಗ್ರಹ ತಂತ್ರಜ್ಞಾನ, ಪ್ರೊಪಲ್ಷನ್ ವ್ಯವಸ್ಥೆಗಳು, ಇಮೇಜಿಂಗ್ ಮತ್ತು ಇತರ ಪ್ರವರ್ತಕ ಕ್ಷೇತ್ರಗಳಲ್ಲಿ ಪ್ರಗತಿಗೆ ಕೊಡುಗೆ ನೀಡುತ್ತಿದೆ ಎಂಬುದರತ್ತ ಅವರು ಗಮನಸೆಳೆದರು. "ಭಾರತದ ಅನೇಕ ಬಾಹ್ಯಾಕಾಶ ಕಾರ್ಯಾಚರಣೆಗಳನ್ನು ಮಹಿಳಾ ವಿಜ್ಞಾನಿಗಳು ಮುನ್ನಡೆಸುತ್ತಿದ್ದಾರೆ" ಎಂದು ಅವರು ಹೆಮ್ಮೆಯಿಂದ ಹೇಳಿಕೊಂಡರು.

"ಭಾರತದ ಬಾಹ್ಯಾಕಾಶ ದೃಷ್ಟಿಕೋನವು 'ವಸುದೈವ ಕುಟುಂಬಕಂ' ಎಂಬ ಪ್ರಾಚೀನ ತತ್ವಶಾಸ್ತ್ರದಲ್ಲಿ ಬೇರೂರಿದೆ" ಎಂದು ಪುನರುಚ್ಚರಿಸಿದ ಪ್ರಧಾನಿ ಮೋದಿ, ಭಾರತದ ಬಾಹ್ಯಾಕಾಶ ಪ್ರಯಾಣವು ಕೇವಲ ಅದರ ಸ್ವಂತ ಬೆಳವಣಿಗೆಯ ಬಗ್ಗೆ ಮಾತ್ರವಲ್ಲ, ಜಾಗತಿಕ ಜ್ಞಾನವನ್ನು ಶ್ರೀಮಂತಗೊಳಿಸುವುದು, ಹಂಚಿಕೆಯ ಸವಾಲುಗಳನ್ನು ಎದುರಿಸುವುದು ಮತ್ತು ಭವಿಷ್ಯದ ಪೀಳಿಗೆಗೆ ಸ್ಫೂರ್ತಿ ನೀಡುವುದು ಎಂದು ಒತ್ತಿ ಹೇಳಿದರು. ಸಹಯೋಗಕ್ಕೆ ಭಾರತದ ಬದ್ಧತೆಯನ್ನು ಒತ್ತಿ ಹೇಳಿದ ಅವರು, ರಾಷ್ಟ್ರವು ಒಟ್ಟಾಗಿ ಕನಸು ಕಾಣಲು, ಜೊತೆಯಾಗಿ ನಿರ್ಮಿಸಲು ಮತ್ತು ಒಟ್ಟಿಗೆ ನಕ್ಷತ್ರಗಳನ್ನು ತಲುಪಲು ಬದ್ಧವಾಗಿದೆ ಎಂದು ಹೇಳಿದರು. ವಿಜ್ಞಾನ ಮತ್ತು ಉತ್ತಮ ಭವಿಷ್ಯಕ್ಕಾಗಿ ಸಾಮೂಹಿಕ ಆಕಾಂಕ್ಷೆಯಿಂದ ಮಾರ್ಗದರ್ಶನ ಪಡೆದ ಬಾಹ್ಯಾಕಾಶ ಅನ್ವೇಷಣೆಯಲ್ಲಿ ಹೊಸ ಅಧ್ಯಾಯ ಆರಂಭವಾಗಲಿ ಎನ್ನುವ ಮೂಲಕ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿದರು.

## ಕವಿ ಮನಸು

### ಪರಿಸರ ಪ್ರೇಮಿ

ಪರಿಸರ ಪ್ರೇಮಿಯೊಬ್ಬ
ಚಂದ್ರನ ಹಿಡಿಯಲು ಹೋದ
ಕಲ್ಲು ಮುಳ್ಳಿನ ಅರಿವು ಇರಲಿಲ್ಲ
ಏಕಾಂಗಿ ಹೊಂಟ ಬಂಡೆ ಏರುತ
ಚಂದ್ರ ಇವನ ನೋಡಿ ನಗುತ್ತಿದ್ದ
ಖುಷಿಯಿಂದ ಅತ್ತಿತ್ತ ನೋಡಿದ
ಕೆಳಗಡೆ ಪ್ರತಾಪ ಸುತ್ತಲು ಕಲ್ಲು
ಭಯವಾಯ್ತು ನಡುಗಿದ
ಕಥೆ ಕವನಗಳಲ್ಲಿ ವರ್ಣನೆ ಚಂದ
ಓದಿ ಆಸ್ವಾದಿಸಬೇಕೆಂದ
ದೂರದಿ ನೋಡಿ ಆನಂದಿಸಬೇಕೆಂದ
ಹತ್ತಿರ ಹುಡುಕಬಾರದೆಂದ
ಹುಚ್ಚು ಸಾಹಸ ನಾ ಮುರ್ಖನೆಂದ
ಮರಳಿ ಮನೆ ಕಡೆ ನಡೆದ
ಚಂದ್ರ ತನ್ನ ಪಯಣ ಮುಗಿಸಿದ್ದ
ಸುತ್ತಲು ಕತ್ತಲು ಭಯದಿ ನಡುಗಿದ
ತಾರೆಗಳು ಇವನನ್ನು ನೋಡಿ ನಗುತ್ತಿದ್ದವು
ಇವನಿಗೆ ಮಂದ ಬೆಳಕು ನೀಡಿದವು
ಎಡವುತ್ತ ಬೀಳುತ್ತಾ ಊರು ಸೇರಿದ
ಸೂರ್ಯ ಉದಯಿಸಿದ ಎಲ್ಲೆಡೆ ಬೆಳಕು
ಚೆಲ್ಲಿದ
ಪರಿಸರ ಪ್ರೇಮಿ ಸುಸ್ತಾಗಿ ಮಲಗಿಬಿಟ್ಟಿದ್ದ!

– ಚಂದ್ರಶೇಖರಯ್ಯ ರೋಣದಮಠ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

## ಅತಿಥಿ ಶಿಕ್ಷಕ, ಉಪನ್ಯಾಸಕರ ನೇಮಕ: ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಕಂಪ್ಲಿಯ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಬಳ್ಳಾರಿ ನಗರದ ಅಲ್ಪಸಂಖ್ಯಾತರ ಮೌಲಾನಾ ಆಜಾದ್ ಮಾದರಿ ಮಾದರಿ ಪದವಿ ಪೂರ್ವ ಕಾಲೇಜಿನಲ್ಲಿ 2025–26 ನೇ ಶೈಕ್ಷಣಿಕ ಸಾಲಿಗೆ ಖಾಲಿ ಇರುವ ಅತಿಥಿ ಶಿಕ್ಷಕ ಮತ್ತು ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಹ ವಿದ್ಯಾರ್ಹತೆವುಳ್ಳ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅತಿಥಿ ಶಿಕ್ಷಕರ ಹುದ್ದೆಗೆ ಬಿಎಸ್ಸಿ ಬಿಇಡಿ ಮತ್ತು ಅತಿಥಿ ಉಪನ್ಯಾಸಕರ ಹುದ್ದೆಗೆ ಎಂಎ ಬಿಇಡಿ ಅಥವಾ ಎಂಎಸ್ಸಿ ಬಿಇಡಿ ವಿದ್ಯಾರ್ಹತೆ ಹೊಂದಿದ ಅರ್ಹರು ಅರ್ಜಿ ಸಲ್ಲಿಸಬಹುದಾಗಿದೆ.

ಮಾಹಿತಿಗಾಗಿ ಕಂಪ್ಲಿಯ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಮೊ.7353346069 ಮತ್ತು ಬಳ್ಳಾರಿ ನಗರದ ಬೆಳಗಲ್ಲು ರಸ್ತೆಯ ಅಲ್ಪಸಂಖ್ಯಾತರ ಮೌಲಾನಾ ಆಜಾದ್ ಮಾದರಿ ಮಾದರಿ ಪದವಿ ಪೂರ್ವ ಕಾಲೇಜಿನ ಮೊ.8861623814 ಅಥವಾ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಹತ್ತಿರದ ಮೌಲಾನಾ ಆಜಾದ್ ಭವನದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಚೇರಿ(ದೂ.08392–200125) ಗೆ ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ವಿಠೋಬಾ ಹೊನಕಾಂಡೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಪಿಎಫ್‌ಓ: ಮೇ 13 ರಂದು ಪಿಂಚಣಿ ಅದಾಲತ್

**ಹಂಪಿ ಟೈಮ್ಸ್ ಬಳ್ಳಾರಿ**

ಕಾರ್ಮಿಕರ ಭವಿಷ್ಯ ನಿಧಿ ಸಂಸ್ಥೆಯ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಪಿಂಚಣಿದಾರರ ಕುಂದು ಕೊರತೆ ಆಲಿಸಿ, ಪರಿಹರಿಸಲು ಮೇ 13 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 01 ಗಂಟೆಯವರೆಗೆ ನಗರದ ಪ್ರಾದೇಶಿಕ ಕಚೇರಿಯಲ್ಲಿ ಪಿಂಚಣಿ ಅದಾಲತ್ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಪ್ರಾದೇಶಿಕ ಕಚೇರಿಯ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತ ಕೆ.ವೆಂಕಟ ಸುಬ್ಬಯ್ಯ ಅವರು ತಿಳಿಸಿದ್ದಾರೆ.


ಬಳ್ಳಾರಿ, ವಿಜಯನಗರ, ಕೊಪ್ಪಳ, ಚಿತ್ರದುರ್ಗ ಜಿಲ್ಲೆಗಳ ಪಿಂಚಣಿದಾರರು ತಮ್ಮ ಕುಂದು ಕೊರತೆಗಳಿದ್ದಲ್ಲಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿಗೆ ಪತ್ರ ಅಥವಾ ಇ–ಮೇಲ್ ಮೂಲಕ ಪಿ.ಪಿ.ಓ ಸಂಖ್ಯೆ, ವಿಳಾಸ, ದೂರವಾಣಿ, ಮೊಬೈಲ್ ಸಂಖ್ಯೆ ಮತ್ತು ಕುಂದು ಕೊರತೆಯ ಸ್ವರೂಪ ಹಾಗೂ ಇತ್ಯಾದಿಗಳನ್ನು ಅಂಚೆ ಪತ್ರದ ಮೂಲಕ ಮೇ 09 ರೊಳಗಾಗಿ ತಿಳಿಸಬಹುದು. ಪತ್ರ ಲಕೋಟೆ ಮೇಲೆ ಪಿಂಚಣಿ ಅದಾಲತ್ ಎಂದು ಬರೆಯಬೇಕು.

ಹೆಚ್ಚಿನ ಮಾಹಿತಿಗಾಗಿ ದೂ.08392–268943 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿಡಿಪಿಐಗೆ ಸನ್ಮಾನ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆ 2024–25ನೇ ಸಾಲಿನ ಎಸ್ಸೆಸ್ಸೆಲ್ಸಿ ಫಲಿತಾಂಶ 27ನೇ ಸ್ಥಾನದಿಂದ 19ನೇ ಸ್ಥಾನಕ್ಕೇರಿ ಕಲ್ಯಾಣ ಕರ್ನಾಟಕದಲ್ಲೇ ಪ್ರಥಮ ಸ್ಥಾನ ಪಡೆದಿದ್ದರಿಂದ ಇಂಡಿಯಾ ಫೌಂಡೇಶನ್ ಫಾರ್ ಆರ್ಟ್ಸ್ ಸಂಸ್ಥೆಯ ಕಲಿ ಕಲಿಸು ವಿಭಾಗದವರು ಬುಧವಾರ ಶಾಲಾ ಶಿಕ್ಷಣ ಇಲಾಖೆಯ ವಿಜಯನಗರ ಜಿಲ್ಲಾ ಉಪನಿರ್ದೇಶಕ ವೆಂಕಟೇಶ ರಾಮಚಂದ್ರಪ್ಪ ಅವರಿಗೆ ಹೂಗುಚ್ಛ ನೀಡಿ ಸನ್ಮಾನಿಸಿದರು. ಐಎಫ್‌ಐ ಕಲಿ– ಕಲಿಸು ವಿಭಾಗದ ಮುಖ್ಯಸ್ಥ ಟಿ.ಎನ್.ಕೃಷ್ಣಮೂರ್ತಿ, DYPC ಶ್ರೀನಿವಾಸ್, ವಿಷಯ ಪರಿವೀಕ್ಷಕ ಬಸ್ವಂತಯ್ಯ ಹಿರೇಮಠ್. ಸಂಪನ್ಮೂಲ ವ್ಯಕ್ತಿಗಳಾದ ಕಿಶನರಾವ್ ಕುಲಕರ್ಣಿ, ಕೊಟ್ರೇಶ್ ಬಿ.ಗುರುರಾಜ್ ಶಾಂತಾ ಮಣಿ. ಸಹನಾ ಪಿಂಜರ್. ರಿಯಾಜ್ ಇದ್ದರು.



## ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪಿಗೆ ಶಿಕ್ಷೆ

**ಹಂಪಿ ಟೈಮ್ಸ್ ಕೊಪ್ಪಳ**

ಅಪ್ರಾಪ್ತ ವಯಸ್ಸಿನ ಬಾಲಕಿ ಮೇಲೆ ಅತ್ಯಾಚಾರ ಮಾಡಿದ ಆರೋಪಿಗೆ 20 ವರ್ಷ ಜೈಲು ಶಿಕ್ಷೆ ಮತ್ತು ರೂ. 05,000 ಗಳ ದಂಡವನ್ನು ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತ ವಿಲೇವಾರಿ [ಪೋಕ್ಸೋ) ನ್ಯಾಯಾಲಯ ವಿಧಿಸಿದೆ.

ಮುನಿರಾಬಾದ ಪೋಲಿಸ್ ಠಾಣೆ ವ್ಯಾಪ್ತಿಯ ಶಹಪುರ ಗ್ರಾಮ ನಿವಾಸಿಯಾದ ಅಪ್ರಾಪ್ತ ವಯಸ್ಸಿನ ಬಾಧಿತಳಿಗೆ ಬಸಾಪುರ ಗ್ರಾಮದ ಭೀಮೇಶ ತಂದೆ ಮಿನಾಲೆಪ್ಪ ಎಂಬಾತನು ಶಹಪುರ ಉರುಸಿಗೆ ಹೋದಾಗ ಬಾಧಿತಳ ಪರಿಚಯವಾಗಿ ಬಾಧಿತಳು ಕಾಲೇಜಿಗೆ ಹೋಗಿ ಬರುವಾಗ ಹಿಂಬಾಲಿಸಿ ಪ್ರೀತಿಸುವುದಾಗಿ ಮತ್ತು ಮದುವೆಯಾಗುವುದಾಗಿ ಪುಸಲಾಯಿಸಿ 2022ರ ಆಗಸ್ಟ್ 13 ರಂದು ಸಾಲು ಮರದ ತಿಮ್ಮಕ್ಕ ಪಾರ್ಕನಲ್ಲಿ ಪ್ರಥಮ ಬಾರಿ ಸಂಭೋಗ ಮಾಡಿರುತ್ತಾನೆ.

ನಂತರದಲ್ಲಿ ಆರೋಪಿತನು ಬೇರೆ ಬೇರೆ ಸ್ಥಳಗಳಲ್ಲಿ ಸಂಭೋಗ ಮಾಡಿದ್ದು ಇರುತ್ತದೆ. 2022ರ ಸೆಪ್ಟೆಂಬರ್ 1 ರಂದು ಬಾಧಿತಳು ಕಾಲೇಜಿಗೆಂದು ಕೊಪ್ಪಳಕ್ಕೆ ಹೋಗಿ ಅಲ್ಲಿ ಪರೀಕ್ಷೆ ಬರೆದು ಗಂಗಾವತಿಗೆ ತೆರಳಿ ಯಾರಿಂದಲೋ ರೂ. 500 ಗಳನ್ನು ಫೋನ್ ಪೇ ಮಾಡಿಸಿಕೊಂಡು ಮಂಡ್ಯಕ್ಕೆ ಹೋಗಿ ಅಲ್ಲಿಂದ ಮಳವಳ್ಳಿಗೆ ಹೋಗಿ ಅಲ್ಲಿನ ಒಂದು ನರ್ಸರಿಯಲ್ಲಿ ಹಾಕಿರುವ ಶೆಡ್ಡಿನಲ್ಲಿ ವಾಸವಾಗಿದ್ದು ಆರೋಪಿತನು ರಾತ್ರಿ ವೇಳೆಯಲ್ಲಿ ಬಾಧಿತಳಿಗೆ ಸಂಭೋಗ ಮಾಡಿರುತ್ತಾನೆ. ಈ ಆರೋಪದ ಹಿನ್ನೆಲೆಯಲ್ಲಿ ಮುನಿರಾಬಾದ ಪೋಲಿಸರು ದೂರು ಸ್ವೀಕರಿಸಿ ಶ್ರೀದೇವಿ ಸಿಎಚ್‌ಸಿ ಇವರು ಪ್ರಕರಣದ ಪ್ರಥಮ ಹಂತದ ತನಿಖೆಯನ್ನು ನಿರ್ವಹಿಸಿ ಮುಂದಿನ ತನಿಖೆಯನ್ನು ಕೊಪ್ಪಳ ಸಿಪಿಐ ವಿಶ್ವನಾಥ ಹಿರೇಗೌಡರ ಇವರು ನಿರ್ವಹಿಸಿ ಆರೋಪಿತನ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ಪ್ರಕರಣವು ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತ ವಿಲೇವಾರಿ [ಪೋಕ್ಸೋ) ನ್ಯಾಯಾಲಯದ ಸ್ಪೇ.ಎಸ್‌ಸಿ[ಪೋಕ್ಸೋ] ಸಂ: 60/2022 ರಲ್ಲಿ ದಾಖಲಾಗಿದ್ದು, ವಿಚಾರಣೆಯನ್ನು ನಡೆಸಿದ ನ್ಯಾಯಾಲಯ ಆರೋಪಿ ಭೀಮೇಶ ತಂದೆ ಮಿನಾಲೆಪ್ಪ ಬಸಾಪುರ ಇತನ ಮೇಲಿನ ಆರೋಪಣೆಗಳು ಸಾಭೀತಾಗಿದ್ದರಿಂದ ಆರೋಪಿಗೆ 20 ವರ್ಷಗಳ ಜೈಲು ಶಿಕ್ಷೆ ಹಾಗೂ ರೂ.5,000 ಗಳ ದಂಡವನ್ನು ಭರಿಸುವಂತೆ ಆದೇಶಿಸಿ ಗೌರವಾನ್ವಿತ ಡಿ.ಕೆ.ಕುಮಾರ, ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತ ವಿಲೇವಾರಿ (ಪೋಕ್ಸ್) ನ್ಯಾಯಾಲಯ ಕೊಪ್ಪಳ ಇವರು 2025 ಮೇ 5 ರಂದು ತೀರ್ಪು ಹೊರಡಿಸಿರುತ್ತಾರೆ. ಸರ್ಕಾರದ ಪರವಾಗಿ ಗೌರಮ್ಮ ಎಲ್. ದೇಸಾಯಿ ವಿಶೇಷ ಸರ್ಕಾರಿ ಅಭಿಯೋಜಕರು ಪ್ರಕರಣ ನಡೆಸಿ ವಾದ ಮಂಡಿಸಿದ್ದರು. ಮುನಿರಾಬಾದ ಪೋಲಿಸ್ ಠಾಣೆಯ ಸಿಬ್ಬಂದಿ ಹನುಮಂತಪ್ಪ ಸಿಎಚ್‌ಸಿ–174 ಇವರು ಸಕಾಲಕ್ಕೆ ಸಾಕ್ಷಿದಾರರನ್ನು ನ್ಯಾಯಾಲಯದ ಮುಂದೆ ಹಾಜರಪಡಿಸುವಲ್ಲಿ ಸಹಕರಿಸಿರುತ್ತಾರೆ ಎಂದು ವಿ.ಸರ್ಕಾರಿ ಅಭಿಯೋಜಕರು [ಪೋಕ್ರೋ), ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದೇಸಿ ತಳಿಗಳ ಸಂರಕ್ಷಣೆ – ಉತ್ತೇಜನ ಕಾರ್ಯಕ್ರಮ

**ಹಂಪಿ ಟೈಮ್ಸ್ ಚಿತ್ರದುರ್ಗ**

ಕೃಷಿಯಲ್ಲಿ ದೇಸಿ ತಳಿಗಳ ಸಂರಕ್ಷಣೆಗೆ ಸರ್ಕಾರ ಮುಂದಾಗಿದ್ದು, ಕೃಷಿ ಇಲಾಖೆ ಮೂಲಕ 'ದೇಸಿ ತಳಿಗಳ ಸಂರಕ್ಷಣೆ ಮತ್ತು ಉತ್ತೇಜನ ಕಾರ್ಯಕ್ರಮ' ಘೋಷಿಸಿದೆ. ದೇಸಿ ತಳಿಗಳನ್ನು ಸಂರಕ್ಷಿಸುತ್ತಿರುವ ರೈತರು ಈ ಕಾರ್ಯಕ್ರಮದ ಉಪಯೋಗ ಪಡೆಯಲು ವಿವರವನ್ನು ಹತ್ತಿರದ ರೈತ ಸಂಪರ್ಕ ಕೇಂದ್ರದಲ್ಲಿ ದೇಸಿ ತಳಿಗಳ ನೋಂದಾಯಿಸಬೇಕಿದೆ. ಆಯಾ ಪ್ರದೇಶದಲ್ಲಿ ಸ್ಥಳೀಯ ತಳಿಗಳು ಅಥವಾ ಸಾಂಪ್ರದಾಯಕ ಪದ್ಧತಿಯಿಂದ ಅಭಿವೃದ್ಧಿ ನಿರ್ವಹಿಸಲ್ಪಡುವ ತಳಿಗಳನ್ನು ದೇಸಿ ತಳಿಗಳೆಂದು ಕರೆಯಲಾಗಿದು, ರೈತರು ಸಾಂಪ್ರದಾಯಕ, ಪರಂಪರೆ, ಜಾನಪದ ಪ್ರಭೇದಗಳಾಗಿರುತ್ತವೆ. ಇಂತಹ ವಿಶೇಷ ದೇಶಿ ತಳಿಗಳನ್ನು ಉಳಿಸಿಕೊಂಡು ಬಂದಿರುವ ರೈತರು ಕೃಷಿ ಇಲಾಖೆಯೊಂದಿಗೆ ಕೆಲಸ ಮಾಡಲು ಅವಕಾಶವಾಗಲಿದೆ. ಈ ಕಾರ್ಯಕ್ರಮದಡಿ ಆಯ್ಕೆಯಾದ ಬೆಳೆಗಳೆಂದರೆ ಭತ್ತ, ರಾಗಿ, ಜೋಳ, ತೊಗರಿ, ಹುರುಳಿ, ಅವರೆ, ಅಲಸಂದೆ, ಮಡಕಿಕಾಳು, ಹುಚ್ಚೆಳ್ಳು, ಕುಸುಬೆ, ಎಳ್ಳು, ನವಣೆ, ಸಾಮೆ, ಊದಲು, ಕೊರಲೆ, ಹಾರಕ, ಬರಗು ಮತ್ತು ಸಲಹಾ ಸಮಿತಿ ಶಿಫಾರಸು ಮಾಡುವ ಇತರೆ ಬೆಳೆಗಳಲ್ಲಿ ದೇಸಿ ತಳಿಗಳಿದ್ದರೆ ರೈತರು ಸಮೀಪದ ರೈತ ಸಂಪರ್ಕ ಕೇಂದ್ರದಲ್ಲಿ ನೋಂದಾಯಿಸಿ ಕೊಳ್ಳಬೇಕಿದೆ.

ದೇಸಿ ತಳಿಗಳ ವಿಶಿಷ್ಟ ಗುಣಲಕ್ಷಣಗಳು ಮತ್ತು ಭೌಗೋಳಿಕ ಮೂಲಗಳ ಕಾರಣದಿಂದ ವೈಜ್ಞಾನಿಕವಾಗಿ ಅಭಿವೃದ್ಧಿ ಪಡಿಸಲಾದ ಅಧಿಸೂಚಿತ ಪ್ರಭೇದಗಳಿಗಿಂತ ದೇಸಿ ತಳಿಗಳು ಪೋಷಕಾಂಶಗಳಲ್ಲಿ ಸಮೃದ್ಧವಾಗಿವೆ. ಆದರೆ, ಕೆಲವೇ ರೈತರ ಇಂತಹ ದೇಸಿ ತಳಿ ಕೃಷಿ ಮಾಡುವುದನ್ನು ಮುಂದುವರೆಸಿರುವ ಹಿನ್ನೆಲೆಯಲ್ಲಿ ನೂತನ ಕಾರ್ಯಕ್ರಮ ಪರಿಚಯಿಸಲಾಗಿದೆ.

ಕಣ್ಮರೆಯಾಗುತ್ತಿರುವ ತಳಿಗಳನ್ನು ಸಂರಕ್ಷಿಸುವ ಜತೆಗೆ ಆಯಾ ಸ್ಥಳೀಯ ಪ್ರದೇಶಕ್ಕೆ ಸೂಕ್ತವಾದ ದೇಸಿ ತಳಿಗಳ ಗುರುತಿಸುವಿಕೆ ಹಾಗೂ ಸಂರಕ್ಷಣೆ ಗುರಿ ಹೊಂದಲಾಗಿದೆ. ಗುರುತಿಸಿದ ದೇಸಿ ತಳಿಗಳನ್ನು ಅಭಿವೃದ್ಧಿಪಡಿಸಿ ಬಿಡುಗಡೆ ಮಾಡುವುದು. ದೇಸಿ ತಳಿಗಳನ್ನು ಹಿಂದಿನಿಂದಲೂ ಸಂರಕ್ಷಿಸಿ, ಕೃಷಿ ಮಾಡುತ್ತಿರುವ ರೈತರಿಗೆ ಬೆಂಬಲ ನೀಡುವ ಜತೆಗೆ ದೇಸಿ ತಳಿಗಳ ಜನಪ್ರಿಯತೆಗೆ ಬೆಂಬಲ ನೀಡುವ ಸಂಕಲ್ಪ ಮಾಡಲಾಗಿದೆ.

**ರೈತರನ್ನು ಗುರುತಿಸುವುದು:** ದೇಸಿ ತಳಿಗಳನ್ನು ಸಂರಕ್ಷಿಸಿ ಮತ್ತು ಬೆಳೆಸುವ ಮೂಲಕ ಕೃಷಿ ಪರಂಪರೆ ಮುಂದುವರೆಸುತ್ತಿರುವ ರೈತರನ್ನು ಗುರುತಿಸಿಸುವುದು ಮತ್ತು ಉತ್ತೇಜಿಸುವುದು ಅಗತ್ಯವಿದ್ದು, ಇದು ದೇಸಿ ತಳಿಗಳ ನಿರಂತರ ಕೃಷಿ ಪ್ರೋತ್ಸಾಹಿಸಲು ಜೀವ ವೈವಿಧ್ಯತೆ ಬೆಂಬಲಿಸಲು ಹಾಗೂ ಸುಸ್ಥಿರ ಕೃಷಿ ಪದ್ಧತಿಗಳನ್ನು ಪೋಷಿಸಲು ಸಹಕಾರಿಯಾಗಲಿದೆ. ದೇಸಿ ತಳಿಗಳ ಸಂರಕ್ಷಣೆ ಮತ್ತು ಕೃಷಿಯಲ್ಲಿ ತೊಡಗಿರುವ ರೈತರಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಒಪ್ಪಿಗೆ ಇರಬೇಕು. ಬೀಜ ಬ್ಯಾಂಕ್‌ನಲ್ಲಿರಿಸಲು ರೈತರು ಕಡ್ಡಾಯವಾಗಿ ಅಗತ್ಯ ಪ್ರಮಾಣದ ದೇಸಿ ತಳಿಗಳ ಬೀಜಗಳನ್ನು ನೀಡಲು ಸಿದ್ಧರಿರಬೇಕು. ಜಾನುವಾರು ನಿರ್ವಹಣೆ, ಕೊಟ್ಟಿಗೆ ಗೊಬ್ಬರ, ಎರೆಹುಳು ಗೊಬ್ಬರ, ಪುನರುತ್ಪಾದಕ ಕೃಷಿ ಮತ್ತು ಇತರ ಸುಸ್ಥಿರ ಕೃಷಿ ಚಟುವಟಿಕೆ ಕೈಗೊಂಡಿರುವ ರೈತರನ್ನು ಕೃಷಿ ಇಲಾಖೆ ಜತೆಯಲ್ಲಿ ಕೊಂಡೊಯ್ಯಲಿದೆಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

Grow Your Business With Us

S.M.Traders & Services

Authorised Distributor for ATLAS COPCO Portable Screw Air Compressors for North Karnataka

Water Well and Non Water Well Applications

web: www.smtradersandservices.com

M: 9686663125 - 9686663132

Atlas Copco

Head Office- Hospet, Vijayanagara district, Karnataka | Branch office 1- Ilkal, Bagalkot district, Karnataka | Branch office 2- Vijayapura, Karnataka

# ಸರಕಾರಿ ನೌಕರರ ಪರಿಣಾಮಕಾರಿ ಕೆಲಸದಿಂದ ಮಾತ್ರ ಅಭಿವೃದ್ಧಿ ಸಾಧ್ಯ

## ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ–ಶಾಸಕ ಬಸವರಾಜ ರಾಯರೆಡ್ಡಿ ಹೇಳಿಕೆ

**ಹಂಪಿ ಟೈಮ್ಸ್ ಕೊಪ್ಪಳ**


ಸರಕಾರಿ ನೌಕರರು ಸರ್ಕಾರದ ನಿಜವಾದ ಕಸ್ಟೋಡಿಯನಗಳಾಗಿದ್ದು ತಾವು ಪರಿಣಾಮಕಾರಿಯಾಗಿ ಕೆಲಸ ಮಾಡಿದಾಗ ಮಾತ್ರ ಸಮಾಜದ ಅಭಿವೃದ್ಧಿಯ ಜೊತೆಗೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ ಎಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಸವರಾಜ ರಾಯರೆಡ್ಡಿ ಹೇಳಿದರು.

ಅವರು ಬುಧವಾರ ಕೊಪ್ಪಳ ಜಿಲ್ಲಾಡಳಿತ. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಜಿಲ್ಲಾ ಶಾಖೆ ಕೊಪ್ಪಳ ಇವರ ಸಹಯೋಗದಲ್ಲಿ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಹಮ್ಮಿಕೊಂಡಿದ್ದ ರಾಜ್ಯ ಸರ್ಕಾರಿ ನೌಕರರ ದಿನಾಚರಣೆ ಹಾಗೂ ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರಧಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದೇಶ ಹಾಗೂ ಜನರ ಸುಧಾರಣೆಗಾಗಿ ಜನಪ್ರತಿನಿಧಿಗಳು ಹಾಗೂ ಸರಕಾರಿ ನೌಕರರು ಉತ್ತಮ ರೀತಿಯಲ್ಲಿ ಕೆಲಸ ಮಾಡಬೇಕಿದೆ. ಜನ ಸೇವೆ ದೇವರ ಸೇವೆ ಇದ್ದಂತೆ. ನಮ್ಮ ದೇಶಗಳಲ್ಲಿ ಬಹಳಷ್ಟು ಜನಸಂಖ್ಯೆ ಜೊತೆಗೆ ಬಡತನವು ಇರುವುದರಿಂದ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ನಾವು ಮಾಡಬೇಕಿದೆ. ಆಡಳಿತದಲ್ಲಿ ಪ್ರಾಮಾಣಿಕತೆಯು ಬರಬೇಕಿದೆ ಎಂದರು.

ಗ್ರಾಮೀಣ ಪ್ರದೇಶಗಳಲ್ಲಿ ಹಿಂದುಳಿದ ಮಕ್ಕಳಿಗೆ ಶಿಕ್ಷಕರು ಪರೀಣಾಮಕಾರಿಯಾಗಿ ಕಲಿಸಬೇಕು. ಶಿಕ್ಷಕರಿಗೆ ಸಮಸ್ಯೆಯಾಗದಂತೆ ಅವರ ವರ್ಗಾವಣೆ ಪ್ರಕ್ರಿಯೆಗೆ ಕೌನ್ಸಿಲಿಂಗ ತರಲಾಗಿದೆ. ಅಬಕಾರಿ. ಸಬ್ ರಿಜಿಸ್ಟಾರ್. ಗಣಿ ಮತ್ತು ಭೂ ವಿಜ್ಞಾನ ಸೇರಿದಂತೆ ಇತರೆ ಇಲಾಖೆಗಳಲ್ಲಿಯೂ ಕೌನ್ಸಿಲಿಂಗ ಮೂಲಕ ಸರಕಾರಿ ನೌಕರರ ವರ್ಗಾವಣೆ ಮಾಡುವ ಮೂಲಕ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲಾಗುತ್ತಿದೆ ಎಂದು ಹೇಳಿದರು.

ಹಿಂದುಳಿದ ನಮ್ಮ ಭಾಗದ ಜಿಲ್ಲೆಗಳ ಅಭಿವೃದ್ಧಿಗಾಗಿ ಅಧಿಕಾರಿಗಳು ಶ್ರಮವಹಿಸಿ ಕೆಲಸ ಮಾಡಬೇಕಿದೆ. ದೇಶದಲ್ಲಿಯೇ ಅತ್ಯುತ್ತಮ ಕೌಶಲ್ಯ ಅಭಿವೃದ್ಧಿ ತರಬೇತಿ ಕೇಂದ್ರ ತಳಕಲನಲ್ಲಿ ಮಾಡಲಾಗುತ್ತಿದೆ. ಜಿಲ್ಲೆಯ ಎಲ್ಲಾ ನೌಕರರಿಗೆ ರಾಜ್ಯ ಸರ್ಕಾರಿ ನೌಕರರ ದಿನಾಚರಣೆ



ಶುಭಾಶಯಗಳು ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ ಮಾತನಾಡಿ ಸರಕಾರಿ ನೌಕರರು ಸರಕಾರಿ ನೌಕರಿ ಸೇರಿದಾಗಿನಿಂದ ಹಿಡಿದು ನಿವೃತ್ತಿ ಜೀವನದ ತನಕ ತಮ್ಮ ಕುಟುಂಬದ ಕೆಲಸ ಕಾರ್ಯಗಳನ್ನು ಬದಿಗಿಟ್ಟು ಕೆಲಸ ಮಾಡುತ್ತಾರೆ. ಜನರು ಸಮಸ್ಯೆಗಳನ್ನು ತೆಗೆದುಕೊಂಡು ತಮ್ಮ ಕಛೇರಿಗೆ ಬಂದಾಗ ಅವರ ಸಮಸ್ಯೆಗಳಿಗೆ ಉತ್ತಮ ರೀತಿಯಲ್ಲಿ ಅಧಿಕಾರಿಗಳು ಸ್ಪಂದನೆ ನೀಡಿಬೇಕು. ಜಿಲ್ಲೆಯ ಅಭಿವೃದ್ಧಿಗಾಗಿ ಎಲ್ಲರೂ ಶ್ರಮಿಸಬೇಕಿದೆ ಎಂದು ಹೇಳಿದರು.

ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್ ಮಾತನಾಡಿ ಒಂದು ದೇಶ ಹಾಗೂ ರಾಜ್ಯಗಳ ಆರ್ಥಿಕ ಅಭಿವೃದ್ಧಿಯಲ್ಲಿ ಸರ್ಕಾರಿ ನೌಕರರ ಪಾತ್ರ ಬಹಳ ಮುಖ್ಯ ಇದೆ. ಸರಕಾರಿ ನೌಕರರು ತಮ್ಮ ಎಲ್ಲಾ ಕೆಲಸಗಳನ್ನು ಬದಿಗಿಟ್ಟು ಸಾರ್ವಜನಿಕರ ಸೇವೆ ಮಾಡುತ್ತಾರೆ. ನಮ್ಮ ಜಿಲ್ಲೆಯಲ್ಲಿ ಅಧಿಕಾರಿಗಳು ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ನಾವು ಸರಿಯಾಗಿ ಸ್ಪಂದನೆ ಮಾಡಬೇಕಿದೆ ಎಂದು ಹೇಳಿದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಮಾತನಾಡಿ ನೌಕರರು ಜೀವನದಲ್ಲಿ ಶಿಸ್ತು ಅಳವಡಿಸಿಕೊಳ್ಳಬೇಕು. ಸರಿಯಾದ ಸಮಯಕ್ಕೆ ಕಛೇರಿಗೆ ಹೋಗಬೇಕು. ಜನರು ತಮ್ಮ ಸಮಸ್ಯೆಗಳನ್ನು ತೆಗೆದುಕೊಂಡು ಕಛೇರಿಗೆ ಬಂದಾಗ ಅವರ ಸಮಸ್ಯೆಗಳಿಗೆ ಸ್ಪಂದಿಸಬೇಕು. ನಾವು ಮಾಡುವ ಕೆಲಸದ ಬಗ್ಗೆ ನಮಗೆ ಸಂಪೂರ್ಣ ಮಾಹಿತಿ ಇರಬೇಕು ಅಂದಾಗ ಜನರಿಗೆ ಸರಿಯಾದ ಮಾಹಿತಿ ನೀಡಿ ಅವರ ಸಮಸ್ಯೆಗೆ ಅರ್ಧ ಪರಿಹಾರ ಅಲ್ಲೆ ಸಿಗುತ್ತದೆ ಎಂದು ಹೇಳಿದರು.


ರಾಜ್ಯ ಸರ್ಕಾರಿ ನೌಕರರ ಸಂಘ ಕೊಪ್ಪಳದ ಜಿಲ್ಲಾಧ್ಯಕ್ಷರಾದ ನಾಗರಾಜ ಆರ್. ಜುಮ್ಮನ್ನವರ ಮಾತನಾಡಿ ಸರಕಾರಿ ನೌಕರರು ವರ್ಷದ 364 ದಿನ ಸೇವೆ ಸಲ್ಲಿಸುತ್ತಾರೆ. ಸರಕಾರಿ ನೌಕರರ ದಿನಾಚರಣೆ ಆಚರಿಸಲು ಅವಕಾಶ ನೀಡಿದ ಸರ್ಕಾರಕ್ಕೆ ಎಲ್ಲಾ ನೌಕರ ಭಾಂದವರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೆನೆ. ಸರಕಾರಿ ನೌಕರರಿಗೆ ಜಿಲ್ಲೆಯಲ್ಲಿ ಹೊಸದಾಗಿ ವಸತಿ ಗೃಹಗಳಾಗಬೇಕು ಈಗಾಗಲೇ ಇರುವ ಹಳೆಯ ಕಟ್ಟಡಗಳು ಡೆಮಾಲಿಸ್ ಹಂತದಲ್ಲಿವೆ. ಸರಕಾರಿ ನೌಕರರಿಗೆ ಜಿಲ್ಲೆಯಲ್ಲಿ ತರಬೇತಿ ನೀಡಲು ಒಂದು ಕಟ್ಟಡದ ಅವಶ್ಯಕತೆ ಇದೆ. ಜಿಲ್ಲೆಯಲ್ಲಿ ಶೇ. 40 ಪ್ರತಿಶತ ಹುದ್ದೆಗಳು ಖಾಲಿ ಇದ್ದರು ಎಲ್ಲಾ ಕೆಲಸವನ್ನು ನಾವು ನಿಭಾಯಿಸಿಕೊಂಡು ಹೋಗುತ್ತಿದ್ದೆವೆ ಎಂದು ಹೇಳಿದರು.

ಸಿಂಧನೂರಿನ ಶ್ರೀ ಕೃಷ್ಣ ದೇವರಾಯ ವಿದ್ಯಾ ಸಂಸ್ಥೆಯ ಪ್ರಾಚಾರ್ಯರಾದ ಚಂದ್ರಕಲಾ ಪ್ರಕಾಶ ಅವರು ವೃತ್ತಿ ಜೀವನದಲ್ಲಿ ಒತ್ತಡ ನಿರ್ವಹಣೆ ಕುರಿತು ವಿಶೇಷ ಉಪನ್ಯಾಸ ನೀಡಿದರು.

2023–24ನೇ ಸಾಲಿನ ರಾಜ್ಯ ಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿಗೆ ಭಾಜನರಾದ ಘಟ್ಟಿರಡ್ಡಿಹಾಳ ಗ್ರಾಮದ ಗ್ರಾಮ ಆಡಳಿತ ಅಧಿಕಾರಿ ಮಲ್ಲಮ್ಮ ಹೆಬ್ಬಾಳ ಹಾಗೂ ಜಿಲ್ಲಾ ಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿಗೆ ಭಾಜನರಾದ 10 ಜನ ಸರ್ಕಾರಿ ನೌಕರರಿಗೆ ಇದೇ ಸಂದರ್ಭದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

2023–24ನೇ ಸಾಲಿನ ಜಿಲ್ಲಾ ಮಟ್ಟದ ಸರ್ವೋತ್ತಮ ಪ್ರಶಸ್ತಿಗೆ ಭಾಜನರಾದವರ ವಿವರ. :ಕೊಪ್ಪಳ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಲಿಂಗರಾಜು ಟಿ, ಕೊಪ್ಪಳ ಜಿಲ್ಲಾ ಖಜಾನೆ ಉಪನಿರ್ದೇಶಕ ಕೆ.ಸುರೇಶ ಕೊಪ್ಪಳ ಜಿಲ್ಲಾ ಪಂಚಾಯತ ಲೆಕ್ಕ ಅಧೀಕ್ಷಕ ಅಡವಿ ಅಶೋಕ, ಕೊಪ್ಪಳ ಜಿಲ್ಲಾಧಿಕಾರಿಗಳ ಕಚೇರಿಯ ಶಿರಸ್ತೇದಾರರಾದ ಸತೀಶ್ ಕುಮಾರ, ಯಲಬುರ್ಗಾ ತಹಶೀಲ್ದಾರ ಕಚೇರಿ ಶಿರಸ್ತೇದಾರರಾದ ದೇವರಡ್ಡಿ ಶರಣಪ್ಪ ಮೂಲಿಮನಿ, ಕೊಪ್ಪಳ ಜಿಲ್ಲಾ ಲಸಿಕಾ ಉಗ್ರಾಣದ ಫಾರ್ಮಸಿ ಅಧಿಕಾರಿ ವಸಂತ ಬೆಲ್ಲದ, ತಳಕಲ್ ಗ್ರಾಮ ಪಂಚಾಯತಿಯ ಪಂಚಾಯತ ಅಭಿವೃದ್ಧಿ ಅಧಿಕಾರಿ ವೀರನಗೌಡ ಚನವೀರನಗೌಡ, ಬೂದಗುಂಪಾದ ಗ್ರಾಮ ಆಡಳಿತ ಅಧಿಕಾರಿ ರಮೇಶ ನಾಯ್ಕ, ಹಾಗೂ ಭಾಗ್ಯನಗರ ಪಟ್ಟಣ ಪಂಚಾಯತಿಯ ಹಿರಿಯ ಆರೋಗ್ಯ ನಿರೀಕ್ಷಕರಾದ ಪರಶುರಾಮ ಮಹೇಂದ್ರಕರ, ಕೊಪ್ಪಳ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಿರಿಯ ಆರೋಗ್ಯ ಸಹಾಯಕ ರವಿನಾಗೇಶ, ಈ ಎಲ್ಲಾ ನೌಕರರಿಗೆ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ. ಸಹಾಯಕ ಆಯುಕ್ತರಾದ ಕ್ಯಾ. ಮಹೇಶ್ ಮಾಲಗಿತ್ತಿ. ಜಿಲ್ಲಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಶಿವಪ್ಪ ಜೋಗಿ. ಪ್ರಾಥಮಿಕ ಶಾಲಾ– ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷರಾದ ಶರಣ ಬಸನಗೌಡ ಪಾಟೀಲ್. ಸೇರಿದಂತೆ ಜಿಲ್ಲಾ ಹಾಗೂ ವಿವಿಧ ತಾಲೂಕು ಘಟಕಗಳ ನೌಕರರ ಸಂಘದ ಪದಾಧಿಕಾರಿಗಳು. ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.



**ತುಂಗಭದ್ರಾ ನೀರಿನ ಮಟ್ಟ**

ಬುಧವಾರ : 07–05–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.94 ಅಡಿ |
| ಒಳ ಹರಿವು | 2894 ಕ್ಯುಸೆಕ್ |
| ಹೊರ ಹರಿವು | 283 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 7.285ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1577.79 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 138 ಕ್ಯುಸೆಕ್ |
| ಸಾಮರ್ಥ್ಯ | 3.489 ಟಿಎಂಸಿ |

**ನಿತ್ಯ ಪಂಚಾಂಗ**

ಮಾಸ: ವೈಶಾಖ । ಸಂವತ್ಸರ: ವಿಶ್ವಾವಸು

08–05–2025 – ಗುರುವಾರ

| | |
|---|---|
| ತಿಥಿ | : ಏಕಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಉ.ಪಾಲ್ಗುಣ |
| ಯೋಗ | : ಹರ್ಷಣ |
| ಕರಣ | : ಭವ |
| ಸೂರ್ಯೋದಯ | : 05:50:35 |
| ಸೂರ್ಯಾಸ್ತ | : 18:56:32 |
| ರಾಹು ಕಾಲ | : 14:02–15:40 |
| ಯಮಘಂಡ ಕಾಲ | : 05:51–07:29 |
| ಗುಳಿಕ ಕಾಲ | : 09:07–10:45 |

ADVERTISE WITH US
REACH
THOUSANDS OF POTENTIAL CUSTOMERS
HAMPI TIMES DAILY
Classifieds
Display
Take Advantage of Our Special Discounted rates
For More Information 9448633038
www.hampitimes.com

## ಕಂಪ್ಲಿ: ಸರ್ಕಾರಿ ಪಾಲಿಟೆಕ್ನಿಕ್ ಡಿಪ್ಲೋಮಾ ಪ್ರಥಮ ವರ್ಷ ಪ್ರವೇಶಾತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಕಂಪ್ಲಿ ಪಟ್ಟಣದ ಸರ್ಕಾರಿ ಪಾಲಿಟೆಕ್ನಿಕ್ ನಲ್ಲಿ 2025–26ನೇ ಸಾಲಿಗೆ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಕೋರ್ಸ್ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಸರ್ಕಾರಿ ಪಾಲಿಟೆಕ್ನಿಕ್ ನ ಪ್ರಾಚಾರ್ಯ ಠಾಕ್ರಾ ನಾಯ್ಕ ಅವರು ತಿಳಿಸಿದ್ದಾರೆ.

ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ಸ್, ಮೆಕ್ಯಾನಿಕಲ್ ಮತ್ತು ಸಿವಿಲ್ ಕೋರ್ಸ್‌ಗಳು ಲಭ್ಯವಿದ್ದು, ಮೆರಿಟ್ ಆಧಾರದ ಮೇಲೆ ಆಫ್ ಲೈನ್ ಮೂಲಕ ಸೀಟು ಹಂಚಿಕೆ ಮಾಡಲಾಗುತ್ತದೆ. ಪ್ರವೇಶ ಪ್ರಕ್ರಿಯೆಯು ಮೇ 11 ರಿಂದ 27 ರ ವರೆಗೆ ನಡೆಯಲಿದೆ. ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ಅರ್ಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಕಂಪ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯರ ಕಚೇರಿ ಅಥವಾ ದೂ.08394–250455, ಮೊ.98451 81482, 9686412428, 9482994340, 9606350770, 9731979865, 9739147452 ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

# ಮಕ್ಕಳಲ್ಲಿ ದೇಶಪ್ರೇಮ ಬೆಳೆಸಿ ಸಂಸ್ಕಾರ ಕಲಿಸಿ

## ಶ್ರೀಗುರು ಒಪ್ಪತ್ತೇಶ್ವರಮಠದ ನಿರಂಜನಪ್ರಭು ಮಹಾಸ್ವಾಮಿ ಹೇಳಿಕೆ



**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ತಂದೆ–ತಾಯಿಗಳು ನಿಮ್ಮ ಮಕ್ಕಳಿಗೆ ಶಿಕ್ಷಣದೊಂದಿಗೆ ದೇಶಪ್ರೇಮ, ನಮ್ಮ ಸಂಸ್ಕಾರ ಗಳನ್ನು ಕಲಿಸಿ ಎಂದು ಗರಗನಾಗಲಾಪುರ ಶ್ರೀಗುರು ಒಪ್ಪತ್ತೇಶ್ವರಮಠದ ನಿರಂಜನಪ್ರಭು ಮಹಾಸ್ವಾಮಿಗಳು ಹೇಳಿದರು.

ಅವರು ಪಟ್ಟಣದ ನಗರೇಶ್ವರ ದೇವಸ್ಥಾನದಲ್ಲಿ ನಡೆದ ವಾಸವಿಜಯಂತಿಯನಿಮಿತ್ತ ನಡೆದ, ಪ್ರತಿಭಾಪುರಸ್ಕಾರ ಹಾಗು ಧಾರ್ಮಿಕಸಭೆಯಲ್ಲಿ ಆಶೀರ್ವಚನನೀಡಿದರು.

ಇಂದು ಮಕ್ಕಳಿಗೆ ಧಾರ್ಮಿಕಸಂಸ್ಕಾರದ ಅವಶ್ಯಕತೆ ಇದೆ.ಇಡೀ ವಿಶ್ವವೇ ನಮ್ಮ ಭಾರತೀಯ ಸಂಸ್ಕಾರ ಮತ್ತು ಸಂಸ್ಕೃತಿಯನ್ನು ಒಪ್ಪಿ, ಅಪ್ಪಿಕೊಂಡಿದೆ ನಾವುಗಳು ಅನ್ಯಸಂಸ್ಕೃತಿಗೆ ಮಾರು ಹೋಗುತ್ತಿರುವುದು ಖೇದದಸಂಗತಿ ಎಂದರು.ಇತ್ತೀಚೆಗೆ ಮತಾಂತರ ಪಿಡುಗು ಹೆಚ್ಚುತ್ತಿದೆ,ಭಯೋತ್ಪಾದಕರ ಹಿಂಸಾತ್ಮಕ ಚಟುವಟಿಕೆಗಳು ಹಿಂದೂ ಧರ್ಮಕ್ಕೆ ಅಪಾಯ ತಂದೊಡ್ಡುತ್ತಿವೆ, ಆದ್ದರಿಂದ ಪ್ರತಿಯೊಬ್ಬರು ಜಾಗೃತರಾಗಿ ಧರ್ಮದ ಕುರಿತು ಅಭಿಮಾ ಬೆಳೆಸಿಕೊಳ್ಳಲು ಕರೆನೀಡಿದರು.

ಸಮಾಜದ ಪ್ರತಿಭಾವಂತರನ್ನು ಗುರುತಿಸಿ ಸನ್ಮಾನಿಸಿ ತಾವುಗಳು ಮತ್ತೊಂದು ಸಮಾಜಕ್ಕೆ ಮಾದರಿಯಾಗಿದ್ದೀರಿ,ಹೀಗೆ ತಮ್ಮ ವೃತ್ತಿಯೊಂದಿಗೆ ಸಮಾಜಮುಖಿಯಾಗಿ ಗುರುತಿಸಿಕೊಂಡು ಮಾದರಿಯಾಗಿ ಎಂದರು.ಇಂದು ಎಲ್ಲಾ ವಯೋಮಾನದ ಹಾಗು ಮಕ್ಕಳಿಗೆ ಮೊಬೈಲ್ ಜಗತ್ತಾಗಿದೆ.ಮೊಬೈಲ್ ಗಳಿಂದ ಎಲ್ಲಾ ರೀತಿಯ ಸಂಬಂಧಗಳು,ಆಚರಣೆಗಳು ತಲ್ಲಣಗಳಾಗಿ, ಭವಿಷ್ಯ ಹಾಳಾಗುತ್ತದೆ, ಸಾಧ್ಯವಾದಷ್ಟು ಮೊಬೈಲ್ ಗಳನ್ನು ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಿ ಎಂದರು. ವಾಸವಿ ಯುವಜನ ಸಂಘದ ಗೌರವಾಧ್ಯಕ್ಷ ಕಾಕುಬಾಳುಮಾರುತಿ,ಆರ್ಯವೈಶ್ಯ ಸಮಾಜದ ಅಧ್ಯಕ್ಷ ಚಿದ್ರಸತೀಶ, ವಾಸವಿ ಮಹಿಳಾ ಸಮಾಜದ ಅಧ್ಯಕ್ಷೆ ಜಿ.ಜಯಲಕ್ಷ್ಮೀ ಸತ್ಯನಾರಾಯಣ, ವಾಸವಿ ವನಿತೆಯರ ಸಂಘದ ಅಧ್ಯಕ್ಷೆ ಎಂ.ಅರ್ಚನಾ ಬದ್ರನಾಥ, ವಾಸವಿಕ್ಲಬ್ ಅಧ್ಯಕ್ಷೆ ಸಾವಿತ್ರಿಮಲ್ಲಿಕಾರ್ಜುನ ಉಪಸ್ಥಿತರಿದ್ದರು, ಡಿ. ರಾಘವೇಂದ್ರಶೆಟ್ಟಿ ನಿರ್ವಹಿಸಿದರು.

ಈ ಸಂಧರ್ಭದಲ್ಲಿ ವೈದ್ಯಕೀಯ ಪದವಿಪಡೆದ ಡಾ.ಕೆ.ಸುಹೃತ್, ಡಾ.ಎಂ.ವೆಂಕಟೇಶ, ಬಿ.ಕಾಂ. ಪದವಿಧರೆ ಆರ್.ಪದ್ಮಪ್ರಿಯಾ,ಕಾನೂನಿಪದವಿದರೆ ಈ.ಪೂಜರವರನ್ನು ಡಾ.ವಿಜಯವೆಂಕಟೇಶ ಹಾಗು ಹೃದಯತಜ್ಞ ಡಾ.ಕೆ.ಸುಬ್ರಹ್ಮಣ್ಯರವರ ಪ್ರಾಯೋಜಕತ್ವದಲ್ಲಿ ಗೌರವಿಸಲಾಯಿತು."



## ಸ್ನೇಹ ಸಮ್ಮಿಲನ ಸವಿ ಸವಿ ನೆನಪು

ಮೊದಲ ಪುಟದಿಂದ

ಜಾಗೃತೆ ವಹಿಸಿ ಹಳೆಯ ವಿದ್ಯಾರ್ಥಿಗಳಿಗೆ ಮಾದರಿ ಯಾದ ಸ್ನೇಹ ಸಮ್ಮಿಲನ ಕಾರ್ಯಕ್ರಮವನ್ನು ಯಶ್ವಸಿಯಾಗಿ ನಡೆಸಿದರು. ವರ್ಷದಿಂದ ವರ್ಷಕ್ಕೆ ಈ ಸ್ನೇಹ ಗಟ್ಟಿಗೊಳ್ಳುತ್ತಲೇ ಹೋಗುತ್ತಿರುವುದಕ್ಕೆ ಸ್ನೇಹಿತರ ಮುಖದಲ್ಲಿ ಸಂತೋಷದ ಮಂದಹಾಸ ಎದ್ದು ಕಾಣುತ್ತಿತ್ತು.

ಎಲ್ಲ ಸ್ನೇಹಿತರು ತಮ್ಮ ಸ್ನೇಹಿತರೊಂದಿಗೆ ಸಾಮೂಹಿಕವಾಗಿ ಹೋಳಿಗೆ ಊಟ ಸವಿದರು. ಎಲ್ಲರೂ ಸಂಜೆವರೆಗೂ ಕಾಲಕಳೆದು ಖುಷಿಯಿಂದ ತಮ್ಮ ತಮ್ಮ ಮನೆ ಕಡೆ ಹೆಜ್ಜೆ ಹಾಕಿದರು.

ಈ ವೇಳೆ ರಾಜಶ್ರೀ ಅಧಿಕಾರ್, ಪ್ರಮೀಳಾ.ಪಿ, ಅಶಾ ಕಡ್ಲಿ, ಗೀತಾ, ಉಮಾ ಮಹೇಶ್ವರಿ ಬಿ.ಎಂ, ಅಂಜುಮ್, ವಸುಮತಿ, ಪಾರ್ವತಿ ನಾಣ್ಯಾಪುರ, ಸೀಮಾ ಮೊಗರೆ, ಕುಸುಮಾ, ನಂದಾ.ಎಂ.ಎನ್, ಭೂದೇವಿ, ನೇತ್ರಾವತಿ.ಪಿ, ಪ್ರಶಾಂತ್ ಹಿರೇಮಠ್, ಆನಂದಗೌಡ, ಎಚ್.ಎಂ.ಶಂಭುಲಿಂಗಯ್ಯ, ಬಿ.ವೀರೇಶ್, ಜಜ್ಜೂರಿ ಈರಣ್ಣ, ಹುಸೇನ್ ಬಾಷಾ, ಕೌಟಿ ಸುರೇಶ್, ಎಸ್.ಶಿವಯೋಗಿ, ಕೃಷ್ಣಕುಮಾರ್, ಅಪೀಜ್, ಎಸ್.ಪ್ರಕಾಶ್, ಸೇರಿದಂತೆ ಆನೇಕರು ಭಾಗವಹಿಸಿದ್ದರು.

## ನೀರು ಪೂರೈಸಲು ನಿರ್ಲಕ್ಷ್ಯವಹಿಸಿದ್ರೆ ಪ್ರಕರಣ ದಾಖಲಿಸಿ

ಮೊದಲ ಪುಟದಿಂದ

ಹಲವಾರು ದಶಕಗಳಿಂದ ಸರಕಾರಿ ಜಮೀನು ಗಳಲ್ಲಿ ಮನೆಯನ್ನು ನಿರ್ಮಿಸಿಕೊಂಡು ಯವುದೇ ದಾಖಲಾತಿ ಹೊಂದಿರುವುದಿಲ್ಲ ಅಂತಹವರು ಜಿಲ್ಲೆಯಲ್ಲಿ 349 ಹಾಗೂ ತಾಲೂಕಿನಲ್ಲಿ 120 ಗ್ರಾಮಗಳಿಂದ 20 ಸಾವಿರ ಫಲಾನುಭವಿಗಳಿದ್ದು, ಅವರಿಗೆ ಸಕ್ರಮ ಮಾಡಿ ಸಾಧನಾ ಸಮಾವೇಶದಲ್ಲಿ ಹಕ್ಕು ಪತ್ರಗಳನ್ನು ಒದಗಿಸಲಾಗುವುದು. ವಿಜಯನಗರ ಜಿಲ್ಲೆಯಲ್ಲಿ 73118 ಫಲಾನುಭವಿಗಳಿಗೆ ಪೋಡಿ ಮುಕ್ತ ಮಾಡಿಕೊಡಲಾಗಿದೆ ಎಂದರು.

ಜಿಲ್ಲಾಧಿಕಾರಿ ಎಂ ಎಸ್ ದಿವಾಕರ್, ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ. ಜಿ.ಪಂ ಸಿಇಒ ನೊಂಗ್ಜಾಯ್ ಮೊಹಮದ್ ಅಲಿ ಅಕ್ರಮ ಶಾ, ಎಸಿ ಚಿದಾನಂದಗುರುಸ್ವಾಮಿ, ತಹಶೀಲ್ದಾರ ಬಿ.ವಿ.ಗಿರೀಶಬಾಬು, ತಾ.ಪಂ ಇಒ ಚಂದ್ರಶೇಖರ ವೈ.ಎಚ್, ಸಹಾಯಕ ನಿರ್ದೇಶಕರುಗಳಾದ ಸೋಮಶೇಖರ, ವೀರಣ್ಣಲಕ್ಕಣ್ಣನವರ್, ಶಾಸಕರ ಅಪ್ತ ಸಹಾಯಕ ಮತ್ತೂರು ಬಸವರಾಜ ಹಾಗೂ ಗ್ರಾ.ಪಂ. ಪಿಡಿಒ, ಕಾರ್ಯದರ್ಶಿಗಳು ಇದ್ದರು.